59

# ಕ್ರೈಸ್ತತತ್ವವು ಒಂದು ಪುಸ್ತಕವಾದರೆ

## (19:10, 20-41ಣೆ 20:1)

ಒಬ್ಬ ಪ್ರಸಂಗಿಯ ತನ್ನ ಸಭಿಕರನ್ನು ಪ್ರೋತ್ಸಾಯಿಸಲು, ನಮ್ಮ ಸಭೆಯು ಆರಂಭವಾಗಿ ಅನೇಕ ವರ್ಷಗಳು ಸಂಧು ಹೋಗಿವೆ ಅಂದನು. ಆರಂಭದಲ್ಲಿ ಅಂಬೆಗಾಲಲ್ಲಿ ನಡೆದವರು ಈಗ, ಎದ್ದು ನಡೆದಾಡಲು ಸಾಧ್ಯವಾಗಿದೆ; ಎನ್ನುವಾಗ, ಹಿಂಭಾಗದಲ್ಲಿ ಒಂದು ಸ್ವರವು ಪ್ರಸಂಗಿಯೇ, ಹಾಗೆಯೇ ಮುಂದುವರಿಯಲಿ ಎಂದು ಹೇಳಿತು! ಆಗ ಪ್ರಸಂಗಿಗೆ ಉತ್ತೇಜನವುಂಟಾಯಿತು. "ನಮ್ಮನ್ನು ಸಮರ್ಪಿಸಿಕೊಂಡರೆ, ನಾವು ಓಡಬಹುದು ಎಂಬ ವಿಶ್ವಾಸ ನನಗಿದೆ!" ನಂತರ ಆ ಸ್ವರವು ಅದು ಓಡುತ್ತಿರಲಿ ಎಂದು ಪುನಃ ಹೇಳಿತು! ಪ್ರಸಂಗಿಗೆ ಪುನಃ ಪುಳಕಿತ ಉಂಟಾಯಿತು. "ನಂತರ ಅವನು, ನಾವು ನಮ್ಮ ಮನಸ್ಸನ್ನು ಹಾಕಿದರೆ ಕರ್ತನಿಗಾಗಿ ಹಾರಾಡುವ ಸಾಧ್ಯತೆ ಇದೆ ಅಂದನು! ಹೌದು, ಅದಕ್ಕಾಗಿ ನಾವುಗಳು ಅನೇಕ ತ್ಯಾಗಗಳನ್ನು ಮಾಡಬೇಕಾಗುತ್ತದೆ! "ನಂತರ ಆ ಸ್ವರವು ಪ್ರಸಂಗಿಯೇ ಅದು ನಡೆಯಲಿ ಎಂದು ಮುಂದುವರಿಸಿದನು."

ಶರೀರ ಅಧ್ಯಯನ ಶಾಸ್ತ್ರದಲ್ಲಿ, ಕಿಸೆಯ ಪುಸ್ತಕ ಪ್ರಮುಖವಾದ ಭಾಗವಾಗಿರುತ್ತದೆ. ನಾನು ಒಬ್ಬನನ್ನು ಆರಾಧನೆಗೆ ಕರೆತಂದಾಗ, ಪ್ರಸಂಗಿಯು ಅವನಿಗೆ ಸುವಾರ್ತೆಯನ್ನು ಸಾರಿದಾಗ (ಅಥವಾ ಸಭೆ, ಪ್ರೀತಿ, ಅಥವಾ ದೀಕ್ಷಾಸ್ನಾನದ ಕುರಿತಾಗಿ) ನನಗೆ ಯಾವ ವಿಧವಾದ ಮುಜುಗರವು ಉಂಟಾಗಲಿಲ್ಲ ಎಂದು ಹೇಳುವವರನ್ನು, ನನ್ನ ಸೇವೆಯಲ್ಲಿ ಕೇಳಿರುವದಿಲ್ಲ. ಹೇಗೂ, "ನಾನು ನನ್ನ ಸ್ನೇಹಿತನನ್ನು ಆರಾಧನೆಗೆ ಕರೆತಂದಾಗ ಪ್ರಸಂಗಿಯು ಕಾಣಿಕೆ ತರುವ ವಿಚಾರವನ್ನು ಪ್ರಸಂಗಿಸಿದ್ದರಿಂದ, ನನ್ನ ಜೀವಿತದಲ್ಲಿ ಎಂದಿಗೂ ಆಗದ ಮುಜುಗರವು ನನಗೆ ಉಂಟಾಯಿತು!"

ನಮ್ಮ ಕಿಸೆಗಳ ಬಗ್ಗೆ ಮಾತನಾಡುವಾಗ ಸಭಾ ಸದಸ್ಯರಿಗೆ ಮಾತ್ರ ಮುಜುಗರವಾಗುವದಿಲ್ಲ. ಕ್ರೈಸ್ತರು ಕೆಲವು ಸಭಿಕರಲ್ಲಿ ಹಣದ ಕುರಿತು ಮಾತನಾಡುವಾಗ, ಅವರಲ್ಲಿ ಉಂಟಾದ ಪ್ರತಿಕ್ರಿಯೆಯು ಬಗ್ಗೆ ನೋಡೋಣ. ಕರ್ತನ ಸೇವೆಯಲ್ಲಿರುವ ನಾವುಗಳು ಸಹ ಈ ವಿಚಾರದಲ್ಲಿ ಗಣನೀಯ ಪರಿಶೀಲನೆ ಮಾಡಿಕೊಳ್ಳೋಣ, ಅದನ್ನು ನೋಡುವ ಮೊದಲು ಪೌಲನ ಎಫೆಸದ ಸೇವೆಯನ್ನು ಅಂತ್ಯಗೊಳಿಸಿದ್ದನ್ನು ನೋಡೋಣ.

### ತೆರೆದ ಬಾಗಿಲುಗಳು ಹಾಗೂ ವಿರೋಧಿಗಳು (19:10, 20-22)

ಅಪೊಸ್ತಲರ ಕೃತ್ಯಗಳು 19ರಲ್ಲಿ ಪೌಲನು ಎಫೆಸದಲ್ಲಿ ಮಾಡಿದ ಮುಖ್ಯಾಂಶಗಳನ್ನು ಮಾತ್ರ ನೋಡುತ್ತೇವೆ. ಅಲ್ಲಿ ಪೌಲನಿಗೆ ಉಂಟಾದ ಜಯ ಹಾಗೂ ವಿರೋಧದ ಕುರಿತು ಇತರೆ ಮೂಲಗಳಿಂದ ಹೆಚ್ಚಾಗಿ ಅರಿಯುತ್ತೇವೆ. ಅವನು ಎಫೆಸದಲ್ಲಿ ಮೂರು ವರ್ಷಗಳ ಕಾಲ ಇರುವಾಗ, ಈ ರೀತಿಯಾಗಿ ಬರೆದನು. "ಯಾಕಂದರೆ ಕಾರ್ಯಕ್ಕೆ ಅನುಕೂಲವಾದ ಮಹಾ ಸಂದರ್ಭವು ನನಗೆ ಉಂಟು, ಮತ್ತು ವಿರೋಧಿಗಳು ಬಹಳ ಮಂದಿ ಇದ್ದಾರೆ" (1 ಕೊರಿಂಥ 16:9) ಎಂದಿರುವನು.

"ಬಾಗಿಲು ಅಗಲವಾಗಿದೆ" ಎಂಬುದನ್ನು (ತೆರೆದದೆ), ಅವಕಾಶದ ಕುರಿತಾಗಿ ವಾಕ್ಯದಲ್ಲಿ ಬರೆಯಲಾಗಿದೆ. ಅದು ವಿಶೇಷವಾಗಿ ಸುವಾರ್ತೆ ಸಾರುವ ಅವಕಾಶವಾಗಿದೆ (2 ಕೊರಿಂಥ 2:12; ಕೊಲೊಸ್ಸೆ 4:3). ಪೌಲನು ಸುವಾರ್ತೆಯನ್ನು ಸಾರಲು ನಿಧಾನವಾಗಿ ಆ ಬಾಗಿಲಿನ ಮೂಲಕ ಹೋಗದೆ ವೇಗವಾಗಿ ಹೋದನು. ಅಂತಿಮವಾಗಿ ಅವನು ಎಫೆಸದಿಂದ

ಹೋಗುವಾಗ, ಅಲ್ಲಿ ಬಲವಾದ ಸಭೆಯನ್ನು ಸ್ಥಾಪಿಸಿದ್ದನು ಮತ್ತು ಹಿರಿಯರನ್ನು ನೇಮಿಸಿದ್ದನು (ಅಪೊಸ್ತರ ಕೃತ್ಯಗಳು 20:17). ಆ ಪ್ರಯತ್ನದ ಒಳ್ಳೆತನ ಬಲದಿಂದಲೇ ಆ ಸಭೆಯು ಅನೇಕ ವರ್ಷಗಳ ಕಾಲ ಮುಂದುವರಿಯಿತು. ನಂತರದಲ್ಲಿ ಪೌಲ ಹಾಗೂ ಅವನ ಅವನ ಸಂಗಡಿಗರ ಪ್ರಯತ್ನದ ಫಲವಾಗಿ, "ಆಸ್ಯ ಸೀಮೆಯಲ್ಲಿ ವಾಸವಾಗಿದ್ದ ಯೆಹೂದ್ಯರು ಗ್ರೀಕರೂ *ಎಲ್ಲರೂ* ಕರ್ತನ ವಾಕ್ಯವನ್ನು ಕೇಳಿದರು" (ವಚನ 10ಬಿ; ಒತ್ತಿ ಹೇಳಿದ್ದು ನನ್ನದು), ಮೂರು ವರ್ಷಗಳ ಅತರದಲ್ಲಿ, ಅವರು ಕ್ಯಾಲಿ ಫೋನಿರ್ಯಕ್ಕಿಂತಲೂ, ವಿಶಾಲವಾದ ಸ್ಥಳಕ್ಕೆ ಸುವಾರ್ತೆಯನ್ನು ಸಾರಿದರು,[1] ಮತ್ತು ಹತ್ತಕ್ಕಿಂತ ಹೆಚ್ಚು ಸಭೆಗಳನ್ನು ಸ್ಥಾಪಿಸಿದರು![2]

ಪೌಲನು ಎಫೆಸದಲ್ಲಿರುವಾಗ, ಈ ಹಿಂದೆ ಅವನು ಸ್ಥಾಪನೆ ಮಾಡಿದ ಸಭೆಗಳು ಮುಂದುವರಿಯುವಂತೆ ಪ್ರೋತ್ಸಾಹಿಸಿದನು.[3] ಉದಾಹರಣೆಗೆ, ಅವನು ಎಫೆಸದಲ್ಲಿರುವಾಗ, ಕೊರಿಂಥದವರ ಸಂಪರ್ಕವನ್ನು ಹೊಂದಿದ್ದನು (1 ಕೊರಿಂಥ 5:9).[4] ಮತ್ತು ಏಗಿಯನ್ ಸಮುದ್ರವನ್ನು ದಾಟಿ ಅವರನ್ನು ಸಂಧಿಸಿದ್ದನು (2 ಕೊರಿಂಥ 12:14; 13:1[5]).

"ಅಗಲವಾದ ಬಾಗಿಲು" ತೆರೆದಿದೆ ಎಂಬುದಾಗಿ ಮಾತ್ರ ಹೇಳದೆ, ಅಲ್ಲಿ ಅನೇಕ ವಿರೋಧಿಗಳು ಇದ್ದರು ಎಂದು ಪೌಲನು ತಿಳಿಸಿದನು. ಎಫೆಸದ ಅವನ ದಿನಗಳ ಕುರಿತು ನಂತರ ತಿಳಿಸಿ, "ನಾನು ಬಹು ನಮ್ರತೆಯಿಂದಲೂ ಕಣ್ಣೀರಿನಿಂದಲೂ ಕರ್ತನ ಸೇವೆ ಯನ್ನು ಮಾಡುತ್ತಿದ್ದೆನು. ಇದರಲ್ಲಿ ಯೆಹೂದ್ಯರ ಒಳಸಂಚುಗಳಿಂದ ಸಂಭವಿಸಿದ ಕಷ್ಟಗಳನ್ನು ಸಹಿಸುತ್ತಿದ್ದೆನು" (ಅಪೊಸ್ತಲರ ಕೃತ್ಯಗಳು 20:19). ಅದರ ಸಂಗಡ, ಪೌಲನಿಗೆ, "ಆಸ್ಯ ಸೀಮೆಯಲ್ಲಿ ಸಂಭವಿಸಿದ ಸಂಕಟದ" ಕುರಿತು ತಿಳಿಸಿ, "ನಾವು ಬಲವನ್ನು ಮೀರಿದಂಥ ಅತ್ಯಧಿಕವಾದ ಭಾರದಿಂದ ಕುಗ್ಗಿಹೋಗಿ ಜೀವವುಳಿಯುವ ಮಾರ್ಗವನ್ನು ಕಾಣದೆ ಹೋದೆವು" (2 ಕೊರಿಂಥ 1:8).[6] ಬಹುಶಃ 2 ಕೊರಿಂಥ 11:23-27ರಲ್ಲಿ ಉಲ್ಲೇಖಿಸಿರುವ ಕೆಲವು ಸಂಕಟಗಳು ಎಫೆಸದಲ್ಲಿ ಅವನಿಗೆ ಉಂಟಾಗಿರಬಹುದು, ಯೆಹೂದ್ಯರು ಅವನನ್ನು ಹೊಡೆದರು (ವಚನ 24). ಸೆರೆಗೆ ಹಾಕಲ್ಪಟ್ಟನು (ವಚನ 23). "ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧಮಾಡಿದೆ"[7] (1 ಕೊರಿಂಥ 15:32) ಮತ್ತು ಅಕ್ವಿಲ ಮತ್ತು ಪ್ರಿಸ್ಕಿಲ್ಲರು ತಮ್ಮ ಪ್ರಾಣವನ್ನೇ ಅಪಾಯಕ್ಕೆ ಗುರಿಮಾಡಿಕೊಂಡರು (ರೋಮಾಪುರ 16:3, 4).[8] ಪೌಲನು ಎಫೆಸದಲ್ಲಿ ಅಪಾಯದಲ್ಲಿರುವಾಗ,[9] ಅವನ ಸ್ನೇಹಿತರು ಅವನಿಗಾಗಿ ಅಪಾಯಕ್ಕೆ ಒಳಗಾದರು.

ಅಪೊಸ್ತಲರ ಕೃತ್ಯಗಳು 19:21 ಲೂಕನು ಈ ವಿಚಾರವನ್ನು ಅಂತ್ಯಗೊಳಿಸುವಾಗ; ಈ ಸಂಗತಿಗಳು ಆದ ಮೇಲೆ ಎಂದಿರುವನು. ಲೂಕನು ತಿಳಿಸಿರುವ ಆ ಸಂಗತಿಗಳೇನು? ಎಂಬ ಪ್ರಶ್ನೆಯನ್ನು ಕೇಳಬಹುದು, ಅವುಗಳ ಬಗ್ಗೆ ನಾವು ಕೇಳಬೇಕು! ನಾವು ಪೌಲನನ್ನು ಅಥವಾ ಲೂಕನನ್ನು ಪರಲೋಕದಲ್ಲಿ ಸಂಧಿಸುವಾಗ, ಅದಕ್ಕೆ ಉತ್ತರ ದೊರಕಬಹುದು. ಈ ವಾಕ್ಯದ ಹಿನ್ನೆಲೆಯು ಬಹು ಗುರುತರವಾಗಿದೆ!

ಎಫೆಸದಲ್ಲಿ ಪೌಲನು ಕೆಲವು ವರ್ಷಗಳನ್ನು ಕಳೆದ ನಂತರ ಅಲ್ಲಿಯ ತನ್ನ ಕೆಲಸವು ಸಮಾಪ್ತವಾಯಿತು ಎಂದು ನಿರ್ಧರಿಸಿದನು, ಸುವಾರ್ತೆಯು ಆ ಸೀಮೆಯಲ್ಲೆಲ್ಲಾ ಪ್ರಸಾರವಾಯಿತು. ಬಲವಾದ ಸಭೆಗಳು ಸ್ಥಾಪನೆಗೊಂಡವು. ಜನರಿಗೆ ತರಬೇತಿ ನೀಡಲಾಗಿತು. ಸಭೆಯಲ್ಲಿ ಸೇವೆಯನ್ನು ಮುಂದುವರಿಸಲು ಹಿರಿಯರನ್ನು ನೇಮಿಸಲಾಯಿತು. ಆದ್ದರಿಂದ ಪೌಲನು ಹೊಸ ಯೋಜನೆಯನ್ನು ಹಾಕಿಕೊಂಡನು: "ಈ ಸಂಗತಿಗಳು ಆದ ಮೇಲೆ ಪೌಲನು ತಾನು ಮೆಕೆದೋನ್ಯದಲ್ಲಿಯೂ ಅಖಾಯದಲ್ಲಿಯೂ ಸಂಚಾರ ಮಾಡಿ ಯೆರೂಸಲೇಮಿಗೆ ಹೋಗಬೇಕೆಂದು ಮನಸ್ಸಿನಲ್ಲಿ ಉದ್ದೇಶಿಸಿ ಅಲ್ಲಿಗೆ ಹೋದ ಮೇಲೆ ರೋಮಾಪುರವನ್ನು ಸಹ ನೋಡಬೇಕೆಂದು ಹೇಳಿದನು" (ವಚನ 21).[10] "ಅವನು ಮನಸ್ಸಿನಲ್ಲಿ ನಿರ್ಣಯಿಸಿದನು" ಎಂಬುದರಲ್ಲಿ ಪೌಲನ ನಿರ್ಣಯದ ಗಂಭೀರತೆಯನ್ನು ಗಮನಿಸುತ್ತೇವೆ, ಅಥವಾ ಅವನ ಯೋಜನೆಯಲ್ಲಿ ಪರಿಶುದ್ಧಾತ್ಮನು ಒಳಗೊಂಡಿದ್ದನು.[11]

19:21ರ ಪ್ರಕಾರ ಪೌಲನು ಮೂರು ಯೋಜನೆಗಳನ್ನು ಹೊಂದಿದ್ದನು:

(1) ಯೆರೂಸಲೇಮಿಗೆ ಹೋಗುವ ಯೋಜನೆ - ಯೆರೂಸಲೇಮಿನ ಯೆಹೂದ್ಯ ಕ್ರೈಸ್ತರಿಗೆ, ಅನ್ಯಜನರಿಂದ ಸಹಾಯವನ್ನು ತೆಗೆದುಕೊಂಡು ಹೋಗುವದು (ರೋಮಾಪುರ 15:25, 26, 30, 31). (2) ಯೆರೂಸಲೇಮಿಗೆ ಹೋಗುವ ಮೊದಲು ಮೆಕೆದೋನ್ಯ ಹಾಗೂ ಅಖಾಯವನ್ನು ಸಂಧಿಸುವದು, ಈ ಹಿಂದೆ ಸ್ಥಾಪನೆಗೊಂಡಿದ್ದ ಸಭೆಗಳನ್ನು ಸಂಧಿಸುವದು. ಅವರನ್ನು ಉತ್ತೇಜಿಸುವ ಯೋಜನೆಯೊಂದಿಗೆ, ಯೆರೂಸಲೇಮಿನ ಸಹಾಯವನ್ನು ಪೂರ್ಣ ಮಾಡುವ ಯೋಜನೆಯನ್ನು ಹೊಂದಿದ್ದನು[12] (1 ಕೊರಿಂಥ 16:1, 2; 2 ಕೊರಿಂಥ 8:1-4; 9:1, 2; ರೋಮಾಪುರ 15:26). ಯೆರೂಸಲೇಮಿಗೆ ವಿಶೇಷ ಕಾಣಿಕೆಯನ್ನು ತೆಗೆದುಕೊಂಡು ಹೋದ ನಂತರ, "ತನ್ನ" ಅಂತಿಯೋಕ್ಯ ಸಭೆಯನ್ನು ಸಂಧಿಸಲು ಯೋಜಿಸಿದ್ದನು. (3) ರೋಮಾಪುರ ಪ್ರಯಾಣವನ್ನು ಯೋಜಿಸಿದ್ದನು, ರೋಮಾ ಸಾಮ್ರಾಜ್ಯದ ಕೇಂದ್ರ ವನ್ನು ಸಂಧಿಸುವವನಿದ್ದನು. ಅಲ್ಲಿರುವ ಸಹೋದರರನ್ನು ಸಂಧಿಸುವ ಆಶೆಯನ್ನು ಬಹಳ ಹಿಂದೆಯೇ ಹೊಂದಿದ್ದನು, ಈಗ ರೋಮಾಯವನ್ನು ಸಂಧಿಸುವ ಪ್ರಥಮ ಯೋಜನೆಯನ್ನು ಹಮ್ಮಿಕೊಂಡನು (ರೋಮಾಪುರ 15:23).[13] ಪಾಶ್ಚಿಮಾತ್ಯ ಪ್ರದೇಶಗಳಿಗೆ ಸುವಾರ್ತೆಯನ್ನು ಸಾರಲು, ರೋಮಾಯವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡನು.[14] ಅಪೊಸ್ತಲರ ಕೃತ್ಯಗಳು 19:21ರ ವಚನವು ತಿರುವು ನೀಡುವ ವಚನವಾಗಿದೆ; ಪುಸ್ತಕದ ಕಡೇಯ ಮೂರು ಭಾಗವು ಪೌಲನು ರೋಮಾಯಕ್ಕೆ ಆಗಮಿಸಿದ ಘಟನೆಯ ಬಗ್ಗೆ ತಿಳಿಸುತ್ತದೆ.

ಯೆರೂಸಲೇಮಿಗಾಗಿ ಪರೋಪಕಾರಿ ಕಾಣಿಕೆಯನ್ನು ಸಂಗ್ರಹಿಸಲು ಮೆಕೆ ದೋನ್ಯ ಹಾಗೂ ಅಖಾಯದ ಸಂದರ್ಶನದ ಮೂಲ ಉದ್ದೇಶವಾಗಿತ್ತು. ಹಾಗೂ ಆ ಸಂಧಿಸುವಿಕೆಯಲ್ಲಿ ಇನ್ನೊಂದು ಉದ್ದೇಶವೂ ಒಳಗೊಂಡಿತ್ತು. ಅದೇನೆಂದರೆ ಕೊರಿಂಥ ಸಭೆಯನ್ನು ಸಂಧಿಸುವುದೇ. ಕೊರಿಂಥದ ಪತ್ರವನ್ನು ತೆಗೆದುಕೊಂಡು ಒಂದು ತಂಡವು ಬಂದಿತ್ತು (1 ಕೊರಿಂಥ 16:17; 7:1), ಹಾಗೂ ಸಂದೇಶಕನು ಒಂದು ಸುದ್ಧಿಯನ್ನು ತಂದಿದ್ದನು (1 ಕೊರಿಂಥ 1:11; 5:1), ಅದರಲ್ಲಿ ಸಭೆಯಲ್ಲಿದ್ದ ಸಿದ್ಧಾಂತದ ಹಾಗೂ ಸಮಸ್ಯೆಯ ಸಾರಾಂಶವನ್ನು ಬರೆದಿದ್ದರು[15] (2 ಕೊರಿಂಥ 2:4), ಆದ್ದರಿಂದ ಪೌಲನು ದುಃಖ ಹೊಂದಿದವನಾಗಿ, ಸೊಸ್ಥೆನನ ಕೈಯಲ್ಲಿ ಒಂದು ಪತ್ರವನ್ನು ಬರೆಸಿದ್ದನು[16] (1 ಕೊರಿಂಥ 1:1, 2; 16:8, 9, 21).[17] ಆ ಪತ್ರವನ್ನು ನಾವು 1 ಕೊರಿಂಥ ಎಂದು ಕರೆಯುತ್ತೇವೆ. ಆ ಪತ್ರದಲ್ಲಿ ಆ ಸಭೆಯ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಿ, ಅವನು ಅವರನ್ನು ಮುಂದೆ ಸಂಧಿಸುವನೆಂಬ ಆಶ್ವಾಸನೆಯನ್ನು ನೀಡಿದ್ದನು (1 ಕೊರಿಂಥ 4:19; 16:3-7).

ಪೌಲನು ಆ ಪತ್ರವನ್ನು ಯೌವನ ಪ್ರಸಂಗಿಯಾದ ತಿಮೊಥೆಯನ ಕೈಯಲ್ಲಿ ಕಳುಹಿಸಿದ್ದನು (1 ಕೊರಿಂಥ 4:17; 16:10), "ಹಾಗೂ ಈ ಸಮಯದಲ್ಲಿಯೇ ಪೌಲನು ತನಗೆ ಸೇವೆ ಮಾಡಿದ ತಿಮೊಥಿ ಹಾಗೂ ಎರಸ್ತನನ್ನು ಮೆಕೆದೋನ್ಯಕ್ಕೆ ಕಳುಹಿಸಿರಬಹುದು ಎಂದು ಲೂಕನು ದಾಖಲು ಮಾಡಿರುವನು" (ಅಪೊಸ್ತಲರ ಕೃತ್ಯಗಳು 19:22ಎ). ಅವರನ್ನು ಮೆಕೆದೋನ್ಯದಲ್ಲಿ[18] ಕೆಲವು ಪ್ರಾಥಮಿಕ ಕೆಲಸವನ್ನು ಮಾಡಲು ಕಳುಹಿಸಲಾಗಿತ್ತು.[19] ಅದು ಕೊರಿಂಥಕ್ಕೆ ಹೋಗುವ ಮೊದಲೇ ನಡೆದಿತ್ತು. ತಿಮೊಥಿಯ ಕೆಲಸವನ್ನು ಮುಂದುವರಿಸಲು ಪೌಲನು ತೀತನನ್ನು ಕೊರಿಂಥಕ್ಕೆ ಕಳುಹಿಸಿದನು[20] (2 ಕೊರಿಂಥ 2:12, 13; 7:5-7; 8:6, 23). "ಈ ಮಧ್ಯೆ ಪೌಲನು ಆಸ್ಯದಲ್ಲಿ ಕೆಲಕಾಲ ಇದ್ದನು" (ವಚನ 22ಬಿ). ದೇವರು ಅವನಿಗೆ ತೆರೆದಿದ್ದ ಬಾಗಿಲಿನ ಪ್ರಯೋಜನ ಪಡಕೊಂಡನು.

## ಸಾರೋಣದ ಯಶಸ್ವಿ ಹಾಗೂ ಅಸಂತೋಷ (19:23-41)

ಎಫೆಸದಲ್ಲಿ ಜರುಗಿದ ಪ್ರಮುಖ ಘಟನೆಯನ್ನು ಇಲ್ಲಿ ನೋಡುತ್ತೇವೆ, ಅದು ಪೌಲನ ಹೊರಡುವಿಕೆಗೆ ಅಭ್ಯಾಂತರ ಮಾಡಿದ ಸಂಗತಿಯಾಗಿತ್ತು.[21] ಕ್ರೈಸ್ತರ ಕಿಸೆಯ ಪುಸ್ತಕದ ಪರಿಣಾಮವನ್ನು ಪ್ರಾಯೋಜಿಸುತ್ತದೆ.

**"ಡಯಾನ," "ದೇಮೇತ್ರಿ," ಹಾಗೂ ಅಭ್ಯಾಂತ**

ವಚನ 23ರಲ್ಲಿ, "ಆ ಕಾಲದಲ್ಲಿ ಕ್ರಿಸ್ತ ಮಾರ್ಗದ[22] ವಿಷಯವಾಗಿ ಬಹಳ ಗಲಬೆ ಹುಟ್ಟಿತ್ತು."[23] ಹೇಗೆಂದರೆ ದೇಮೇತ್ರಿಯನೆಂಬ[24] ಒಬ್ಬ ಅಕ್ಕಸಾಲಿಗನಿಂದ ಈ ಗಲಬೆ ಉಂಟಾಯಿತು, ಅವನು ಅರ್ತೆಮೀ[25] ದೇವಿಯ ಸಣ್ಣ ಸಣ್ಣ ಗುಡಿಗಳನ್ನು ಕಟ್ಟಿಸುತ್ತಿದ್ದನು (ವಚನ 24ಎ).

ಗ್ರೀಕ್‌ರ ಅರ್ಥೆಮೀ ದೇವತೆಯನ್ನು KJV ಯು ರೋಮಾಯರ ದೇವತೆ ಡಯಾನ ಎಂದು ತಿಳಿಸುತ್ತದೆ. ಅಪೊಸ್ತಲರ ಕೃತ್ಯದಲ್ಲಿ ಇನ್ನೆಲ್ಲಿಯೂ ಈ ತಪ್ಪನ್ನು ಎಸೆಗಿರುವದಿಲ್ಲ (14:12), ಒಂದು ವೇಳೆ ಇಲ್ಲಿ ಇರಬಹುದು. ಡಯಾನ, ದೇವ ಕನ್ಯೆಯಾಗಿತ್ತು, ಎಫೆಸದಲ್ಲೂ ಮತ್ತು ಇತರೆಡೆಗಳಲ್ಲೂ ಅರ್ಥೆಮಿ ದೇವತೆಯನ್ನು ಫಲವತ್ತ ದೇವತೆ ಎಂದು ಕರೆಯುತ್ತಿದ್ದರು. ಆದ್ದರಿಂದ ಡಯಾನ ದೇವತೆಯನ್ನು ಜಿಂಕೆಗಳು ಹಾಗೂ ನಾಯಿಗಳ ಮಧ್ಯದಲ್ಲಿ ಸುಂದರ ವಾದ ಕನ್ಯೆಯನ್ನಾಗಿ ಚಿತ್ರಿಕರಿಸಿದ್ದರೆ, ಅರ್ಥೆಮಿಯನ್ನು ಸೃಷ್ಟಿ ಹಾಗೂ ಜೀವ ಕೊಡುವ ದೇವತೆಯಾಗಿ ಚಿತ್ರಿಕರಿಸಿದೆ.

ಅರ್ಥೆಮಿಯನ್ನು ತಾಯಿ ದೇವರು ಎಂದು ಪ್ರಪಂಚದಾದ್ಯಂತ ಪೂಜಿಸುವರು (ವಚನ 27),[26] ಎಫೆಸದಲ್ಲಿ ಅದಕ್ಕೆ ಮುಖ್ಯ ಕೇಂದ್ರವನ್ನು ಸ್ಥಾಪಿಸಿದ್ದರು. ಎಫೆಸದ ನಾಗರೀಕರು ಆ ದೇವತೆಯನ್ನು ತಮ್ಮ ಸ್ವಂತದ್ದು ಎಂದು ತಿಳಿದಿದ್ದರು; ಅವರು ಅದನ್ನು "ಎಫೆಸದವರ ಅರ್ಥೆಮಿ ದೇವತೆ" ಎಂದು ಕರೆಯುತ್ತಿದ್ದರು (ವಚನ 28, 34). ಆ ಎಫೆಸ ಪಟ್ಟಣವನ್ನು "ಅರ್ಥೆಮಿ ದೇವತೆಯ ಮಹಾದೇವಸ್ಥಾನದ ಪಟ್ಟಣ" ಎನ್ನುತ್ತಿದ್ದರು (ವಚನ 35).

ಅರ್ಥೆಮಿ ದೇವಸ್ಥಾನದ ಒಳಗಡೆ ಒಂದು ಪ್ರತಿಮೆಯಿತ್ತು. ಸಂಪ್ರದಾಯದ ಪ್ರಕಾರ ಅದು "ಆಕಾಶದಿಂದ ಬಿದ್ದ ಮೂರ್ತಿಯಾಗಿತ್ತು" (ವಚನ 35). ಅದು ಒಂದು ಉಲ್ಕೆಯೂ ಆಗಿರಬಹುದು, ನಂತರ ಅದು ಅರ್ತೆಮೀ ಮೂರ್ತಿಯಾಯಿತು.[27] ಈ ಒಂದು ಬಂಡೆಗಾಗಿ, ಎಫೆಸದ ಹೊರ ಭಾಗದಲ್ಲಿ ಪ್ರಪಂಚದಲ್ಲಿಯೇ ದೊಡ್ಡದಾದ ಬಿಳಿಕಲ್ಲಿನ ದೇವಸ್ತಾನವನ್ನು ಕಟ್ಟಲಾಯಿತು,[28] ಅದು ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾಗಿದೆ, ಪ್ರಪಂಚದ ಅನೇಕ ಜನರನ್ನು ಆಕರ್ಷಿಸುವಂತಿದೆ.

ಪ್ರವಾಸಿಗರು ಅದನ್ನು ನೋಡಲು ಬರುವಾಗ, ಎಲ್ಲಾ ಪ್ರವಾಸಿಗಳಂತೆ ಅವರು ನೆನಪಿನ ಕಾಣಿಕೆಯನ್ನು ಕೊಂಡುಕೊಳ್ಳುತ್ತಿದ್ದರು. ಅವರು ಸುಮ್ಮನೆ ಒಂದು ಐಫೆಲ್‌ವರ್, ಅಥವಾ ಮೈಕಲ್ ಎಂಜಲೋನ *ಡೇವಿಡ್‌ನ* ಚಿತ್ರವನ್ನು ಒಯ್ಯುವಂತೆ ಒಯ್ಯದೆ,[29] ಅವರು ಚಿಕ್ಕ ದೇವಸ್ಥಾನದ ಆಕೃತಿಯನ್ನೆಕೊಂಡುಕೊಳ್ಳುತ್ತಿದ್ದರು (24; NCV) ಅರ್ತೆಮೀ ದೇವಿಯ ದೇವಸ್ಥಾನದ ಮಾದರಿಯ ಕೊಂಡು - ದೇವಸ್ಥಾನಕ್ಕೆ ಅರ್ಪಿಸುತ್ತಿದ್ದರು. ಅವರ ಮೂಢ ನಂಬಿಕೆಯ ಮನಸ್ಸಿನ ಪ್ರಕಾರ, ಅವುಗಳನ್ನು ತಮ್ಮ ಮನೆಗೆ ಒಯ್ಯುವಾಗ, ಅರ್ತೆಮೀ ದೇವಿಯ ಸಾನಿಧ್ಯವನ್ನೇ ತಮ್ಮ ಮನೆಗೆ ಒಯ್ಯುತ್ತಿದ್ದರು.

ಈ ಬೆಳ್ಳಿಯ ಸಣ್ಣ ಗುಡಿಗಳನ್ನು ಮಾಡುತ್ತಿದ್ದವನು ಲಾಭ ಪಡೆಯುತ್ತಿದ್ದನು. ಈ ವ್ಯವಹಾರವು "ಆ ಕಸಬಿನವರಿಗೆ ಅವನು ಬಹಳ ಕೆಲಸ ಕೊಡುತ್ತಿದ್ದನು" (ವಚನ 24ಬಿ). ಆದರೆ ಪೌಲನ ಪ್ರಸಂಗವು ಆ ಆಧಾಯಕ್ಕೆ ಕಡಿವಾಣ ಹಾಕಿತು. ಆಗ ಗುಡಿಗಳನ್ನು ಮಾಡುತ್ತಿದ್ದ ದೇಮೇತ್ರಿಯನು ಕೋಪಗೊಂಡನು, "ಅವನು ಆ ಕಸಬಿನ ಸಂಬಂಧವಾದ ಕೆಲಸದವರನ್ನು ಒಟ್ಟಿಗೆ ಕರಸಿ" (ವಚನ 25ಎ) ಎಚ್ಚರಿಕೆಯನ್ನು ನೀಡಿದನು:

> ಅವನು ಅವರನ್ನೂ ಆ ಕಸಬಿನ ಸಂಬಂಧವಾದ ಕೆಲಸದವರನ್ನೂ ಒಟ್ಟಿಗೆ ಕರಸಿ ಅವರಿಗೆ - ಜನರೇ, ಈ ಕೆಲಸದಿಂದ ನಮಗೆ ಐಶ್ವರ್ಯ ಉಂಟಾಗುತ್ತದೆಂದು ನೀವು ಬಲ್ಲಿರಿ. ಆದರೆ ಕೈಯಿಂದ ಮಾಡಿದ ಮೂರ್ತಿಗಳು ದೇವರುಗಳಲ್ಲವೆಂದು ಆ ಪೌಲನು ಹೇಳಿ ಎಫೆಸದಲ್ಲಿ ಮಾತ್ರವಲ್ಲದೆ ಸ್ವಲ್ಪ ಕಡಿಮೆ ಆಸ್ಯಸೀಮೆಯಲ್ಲೆಲ್ಲಾ[30] ಬಹಳ ಜನರನ್ನು ಒಡಂಬಡಿಸಿ ತಿರುಗಿಸಿಬಿಟ್ಟಿದ್ದಾನೆ ಎಂಬುದನ್ನು ನೀವು ನೋಡುತ್ತೀರಿ, ಕೇಳುತ್ತೀರಿ (ವಚನಗಳು 25ಬಿ, 26).

ವಿಗ್ರಹಾರಾಧನೆಯ ಕುರಿತು ಪೌಲನು ಪೂರ್ಣ ಮನವರಿಕೆ ಹೊಂದಿದ್ದನು. "ದೇವ್ರವು ಮನುಷ್ಯನ ಶಿಲ್ಪವಿದ್ಯೆಯಿಂದಲೂ ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ ಬೆಳ್ಳಿ ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು" (17:29). "ಜನರು ವಿಗ್ರಹಗ ಳನ್ನು ಬಿಟ್ಟು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು" ಹೇಳಲು ಪೌಲನು ತನ್ನ ಶಕ್ತಿಯನ್ನು ಬಳಸಿದ್ದನು (1 ಥೆಸಲೋನಿಕ 1:9). ಅವನ ಪ್ರಸಂಗವು ಪರಿಣಾಮವನ್ನು ಬೀರಿತ್ತು, "ಆದರಿಂದ ಅವನು ಅನೇಕ ಜನರನ್ನು ವಿಗ್ರಹಗಳಿಂದ ಪ್ರತ್ಯೇಕ ಮಾಡಿದ್ದನು" ಅರ್ತೆಮೀ ದೇವತೆಯ ಪೂಜೆಯಿಂದ ಅವರನ್ನು ಬೇರೆಮಾಡಿದ್ದನು. ಇದರ ನಿಮಿತ್ತವಾಗಿ ದೇಮೇತ್ರಿಯನಿಗೂ ಹಾಗೂ ಆ ಗುಡಿಗಳನ್ನು ಮಾಡುತ್ತಿದ್ದ ಜನರಿಗೂ ನಷ್ಟ ಉಂಟಾಯಿತು. ಹೇಗೂ ದೇಮೇತ್ರಿಯನು ತನ್ನ ಕೆಲಸದವ ರೊಂದಿಗೆ ಯಥಾರ್ಥವಾದ ವ್ಯವಹಾರವನ್ನು ಹೊಂದಿದ್ದನು; ಅವನು ತನ್ನ ಪ್ರಾರ್ಥನೆಯ ಪುಸ್ತಕಕ್ಕಿಂತಲೂ, ತನ್ನ ಕಿಸೆಯ ಪುಸ್ತಕದ ಕುರಿತು ಚಿಂತನೆ ಮಾಡುತ್ತಿದ್ದನು.[31]

ಹೇಗೂ, ಅವರಿಗೆ ಉಂಟಾದ ಆರ್ಥಿಕ ನಷ್ಟದ ಕುರಿತಾಗಿ ಸಾರ್ವಜನಿಕರು ಅವನಿಗೆ ಪ್ರೋತ್ಸಾಹ ನೀಡಲಾರರು ಎಂಬದನ್ನು ಅವರು ಅರಿತು, ಧಾರ್ಮಿಕ ಸಮಸ್ಯೆಯನ್ನು ಇವರು ಉಂಟುಮಾಡಿರುವವರು ಎಂದು ಹೇಳಿ ಸಾರ್ವಜನಿಕರ ಪ್ರೋತ್ಸಾಹವನ್ನು ಪಡೆಯಲು ಯತ್ನಿಸಿದರು:

> ಇದರಿಂದ ನಮ್ಮ ಉದ್ಯೋಗಕ್ಕೆ ಅಪಕೀರ್ತಿ ಬರುವ ಹಾಗಿರುವದಲ್ಲದೆ ಅರ್ತೆಮೀ ಮಹಾದೇವಿಯ ದೇವಸ್ಥಾನವು ಗಣನೆಗೆ ಬಾರದೆಹೋಗುವ ಹಾಗೆಯೂ ಎಲ್ಲಾ ಆಸ್ಯ ಸೀಮೆಯೂ ಲೋಕವೂ ಪೂಜಿಸುವ ಈ ದೇವಿಯ ವೈಭವಕ್ಕೆ ಹಾನಿ ಬರುವ ಹಾಗೆಯೂ ಗಂಡಾಂತರವುಂಟೆಂದು ಹೇಳಿದನು (ವಚನ 27).

ಈ ವಾಕ್ಯ ಭಾಗದಲ್ಲಿರುವ ವಿಚಾರದಲ್ಲಿ, ಪ್ರೇರಿತರಲ್ಲದ ಜನರು ಹಲವಾರು ಮಾತುಗಳನ್ನು ಹೇಳಿರುವರು. ಕ್ರೈಸ್ತತ್ವದ ಕುರಿತು ಅನ್ಯರ ತುಟಿಗಳಿಂದ ಸಾಕ್ಷಿವುಂಟಾಯಿತು ಎಂದು ಲೂಕನು ಉಲ್ಲೇಖಿಸಿರುವನು. ದೇಮೇತ್ರಿಯನಿಂಗಿಂತಲೂ ಉತ್ತಮವಾದ ಸಾಕ್ಷಿ ಬೇರೊಂದಿರಲಿಲ್ಲ. ದೇಮೇತ್ರಿಯನು ಪೌಲನ ಪ್ರಸಂಗದ ಕುರಿತು ಒತ್ತಿ ಹೇಳಿದನು,[32] ನಾಲ್ವತ್ತು ವರ್ಷಗಳ ನಂತರ, ಪ್ರಿಸಿಯು ಆಸ್ಯ ಸೀಮೆಯ ಚಕ್ರವರ್ತಿಯಾದ ತ್ರಾಜನನಿಗೆ ಬರೆದಂತೆ, ಕ್ರೈಸ್ತತ್ವವು ದೇವತೆಗಳ ಗುಡಿಗಳು ನಾಶವಾಗುವದಕ್ಕೆ ಕಾರಣವಾಯಿತು ಎಂದು ಹೇಳಿರುವನು.

ದೇಮೇತ್ರಿಯನ ಉರಿಯುಳ್ಳ ಪದಗಳು ನೇರವಾಗಿ ಅವನ ಕೇಳುಗರ ಮೇಲೆ ಪರಿಣಾಮವನ್ನು ಬೀರಿದವು. ಅವನ ಕೇಳುಗರು, "ಅವರು ಈ ಮಾತುಗಳನ್ನು ಕೇಳಿ, ಕೋಪಕ್ರಾಂತರಾಗಿ ಎಫೆಸದವರ" "ಅರ್ತೆಮಿಹಾದೇವಿ ಎಂದು ಆರ್ಭಟಿಸಿದರು!" (ವಚನ 28). ಮತ್ತು ಬೀದಿಗೆ ಓಡಿ ಹೋದರು (ವೆಸ್ಟರ್ನ್ ಟೆಕ್ಸ್ಟ್), ಅವರು ತಮ್ಮ ಘೋಷಣೆಯನ್ನು ಕೂಗಿದರು. (ಕಾರಣಕ್ಕಾಗಿ, ಘೋಷಣೆಗಳನ್ನು ಆಯ್ಕೆ ಮಾಡುವರು.) ವಿರೋಧಿಗಳು ಪಟ್ಟಣದ ಬೀದಿಗಳಲ್ಲಿ ಹೋಗುತ್ತಾ, ಇರುವಾಗ ಊರೆಲ್ಲಾ ಗಲಿಬಿಲಿಯಾಯಿತು (ವಚನ 29ಎ). "ಜನರು ಹಿಡಿದುಕೊಂಡು ಒಗ್ಗಟ್ಟಾಗಿ ನಾಟಕಶಾಲೆಯೊಳಗೆ ನುಗ್ಗಿದರು" (ವಚನ 29ಬಿ). ಆ ನಾಟಕ ಶಾಲೆಯಲ್ಲಿ 25,000 ಜನರು ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿತ್ತು, ಅಲ್ಲಿ ಜನರೆಲ್ಲರೂ ಸೇರಿದಾಗ, ಒಂದು ದೊಡ್ಡ ಗುಂಪಾಯಿತು; ಮತ್ತು ದೊಂಬಿ ಉದ್ಭವವಾಯಿತು.

**ಕೆಲವು ಶಿಷ್ಯರ ಸನ್ನಿಹಿತವಾದ ಮರಣ, ಮತ್ತು ಒಂದು "ಸಂರಕ್ಷಣೆ"**

ಪೌಲನ ವಿರೋಧಿಗಳು ಅವನನ್ನು ತಮ್ಮ ಮೆರವಣಿಗೆಯಲ್ಲಿ ಸಾಗಿಸಬೇಕೆಂದು ಯತ್ನಸಿರಬಹುದು - ಮತ್ತು ಆ ದೊಂಬಿ ಜನರು ಅವನನ್ನು ಕೊಲ್ಲಬಹುದೆಂದು ತಿಳಿದಿದ್ದರು - ಆದರೆ ಅಪೊಸ್ತಲನು ಅವರ ಮಧ್ಯೆ ಇರಲಿಲ್ಲ.[33] ಆದರೆ ಅವು ಅರಿಸ್ತಾರ್ಕನನ್ನು[34] ಹಾಗೂ ಗಾಯನನ್ನು ಕಂಡುಕೊಂಡರು. ಅವರು ಮೆಕೆದೋನ್ಯದಿಂದ ಬಂದ ಪೌಲನ

ಜೊತೆ ಪ್ರಯಾಣಿಕರಾಗಿದ್ದರು (ವಚನ 29ಸಿ).[35] ನಂತರ ಅವರು ಅವರನ್ನು ನಾಟಕ ಶಾಲೆಯೊಳಗೆ ಹಿಡಿದುಕೊಂಡು ಹೋದರು. ಆ ಸಂದರ್ಭವು ಮೂರ್ಖತನದಿಂದ ತುಂಬಿದ್ದು, ಮರಣದ ವಾಸನೆಯು ಉಂಟಾಗಿತ್ತು, ಗಾಯನ ಮತ್ತು ಅರಿಸ್ತಾರ್ಕನ ಪ್ರಾಣವು ಹಗ್ಗದ ತುದಿಯಲ್ಲಿತ್ತು.[36]

ಪೌಲನು, ತನ್ನ ಸ್ನೇಹಿತರು ಅಪಾಯದಲ್ಲಿರುವರೆಂದು ತಿಳಿದು, ತಾನೇ ನಾಟಕ ಶಾಲೆಗೆ ಹೋಗಲು ಮುಂದಾದನು - ಒಂದು ವೇಳೆ ಅವರ ಬಿಡುಗಡೆಗಾಗಿ, ತನ್ನನ್ನೇ ಅರ್ಪಿಸಲು ಯೋಚಿಸಿರಬಹುದು ಹೇಗೂ, "ಪೌಲನು ಜನರೊಳಗೆ ಹೋಗಬೇಕೆಂದಿದ್ದಾಗ[37] ಶಿಷ್ಯರು ಅವನನ್ನು ಬಿಡಲಿಲ್ಲ" (ವಚನ 30). ಆ ಗುಂಪಿಗೆ ಕಾರಣ ನೀಡಲು ಸಾಧ್ಯವಿಲ್ಲ ಎಂದು ಅವರು ಅರಿತಿದ್ದರು, ಮತ್ತು ಪೌಲನನ್ನು ಕಳಕೊಳ್ಳುವದು ದೇವರ ಸೇವೆಗೆ ಅಭ್ಯಾಂತರವಾಗ ಬಹುದಿತ್ತು (2 ಸಮುವೇಲ 21:17).

"ಇದಲ್ಲದೆ ಆಸ್ಯ ಸೀಮೆಯ ಅಧಿಕಾರಿಗಳಲ್ಲಿ ಕೆಲವರು ಅವನಿಗೆ ಸ್ನೇಹಿತರಾಗಿದ್ದರಿಂದ ಅವನ ಬಳಿಗೆ ಜನರನ್ನು ಕಳುಹಿಸಿ - ನೀನು ನಾಟಕ ಶಾಲೆಯೊಳಗೆ ಹೋಗಿ ನಿನ್ನನ್ನು ಅಪಾಯಕ್ಕೆ ಗುರಿ ಮಾಡಿ ಕೊಳ್ಳಬೇಡ ಎಂದು ಬೇಡಿಕೊಂಡರು" (ವಚನ 31). ಆಸ್ಯದವರು ಅಂದರೆ ಗ್ರೀಕ್‌ನ "ಆಸ್ಯದ - ಅಧಿಕಾರಿಗಳು"[38] ಎಂಬ ಜೋಡಿಪದವಾಗಿದೆ. ಸಮೃದ್ಧಿಯನ್ನು ಹೊಂದಿದ್ದ ನಾಗರೀಕರಿಂದ ಆಯ್ಕೆಗೊಂಡ ಅಧಿಕಾರಿಗಳಾಗಿದ್ದರು, ಅವರು ಧಾರ್ಮಿಕ ವಿಧಿಗಳ ಮೆಲುಸ್ತುವಾರಿ ವಹಿಸುತ್ತಿದ್ದರು, ಹಾಗೂ ಸಾರ್ವಜನಿಕ ಆಟಗಳನ್ನು ಆಡಿಸುವಲ್ಲಿ ತಮ್ಮಿಂದಲೇ ವೆಚ್ಚವನ್ನು ಭರಿಸುತ್ತಿದ್ದರು. ಅದೇ ಅವರ ದೇವತೆಗಳಿಗೆ ಗೌರವ ಎಂದು ತಿಳಿದಿದ್ದರು.[39] ಅವರೂ ಸಹ ಕ್ರೈಸ್ತರಾಗಿರಬಹುದು, ಆದರೆ ಪೌಲನ ಮತ್ತು ಅವನ ಧ್ಯೇಯದ ಕುರಿತು ಅನುಕಂಪವುಳ್ಳವರಾಗಿದ್ದರು.[40] ಅವರು ಪೌಲನಿಗೆ ಬೇಡಿಕೊಂಡ ವಿಧದಲ್ಲಿ, "ಪೌಲನನ್ನು ತಡೆಯುವದು ಎಷ್ಟು ಕಷ್ಟಕರವಾಗಿತ್ತು" ಎಂಬ ಸೂಚನೆಯನ್ನು ನೀಡುತ್ತದೆ.

ಆ ಸಮಯದಲ್ಲಿ ನಾಟಕ ಶಾಲೆಯಲ್ಲಿ ಗಲಿಬಿಲಿಯಾಯಿತು. "ಮತ್ತು ಹೆಚ್ಚಾದ ಜನರಿಗೆ ತಾವು ಕೂಡಿ ಬಂದಿದ್ದ ಕಾರಣವು ಗೊತ್ತಿರಲಿಲ್ಲ[41] ಕೆಲವರು ಒಂದು ಬಗೆಯಾಗಿ, ಮತ್ತೆ ಕೆಲವರು ಇನ್ನೊಂದು ಬಗೆಯಾಗಿ ಕೂಗುತ್ತಿದ್ದರು" (ವಚನ 32).[42] ಅದು ಒಂದು ಸಾಂಸ್ಕೃತಿಕ ಜನ ಸಂದಣಿಯಾಗಿತ್ತು. ಅಮೇರಿಕರಾದ ಬೆಂಜಮಿನ್ ಫ್ರಾಂಕ್ಲಿನ್‌ರವರು ಆ ಜನರನ್ನು ಕುರಿತು, "ಅವರುಗಳು ತಲೆಯನ್ನು ತುಂಬಿಕೊಂಡಿರುವುದಾಗಿದ್ದರೂ, ಅವರು ಮೆದುಳು ಇಲ್ಲದವರಾಗಿದ್ದರು" ಎಂದು ಹೇಳಿರುವರು.

ಅವರಲ್ಲಿದ್ದ ಗೊಂದಲದ ಕುರಿತು ಲೂಕನು ತಿಳಿಸಿ, "ಯೆಹೂದ್ಯರು ಅಲೆಕ್ಸಾಂದ್ರನನ್ನು ಮುಂದಕ್ಕೆ ನೂಕಿದರು" (ವಚನ 33ಎ). ಯೆಹೂದ್ಯರು ವಿಗ್ರಹಾರಾದಕರೊಂದಿಗೆ ಒಂದಾಗಿದ್ದಾರೆ? ಅವರು ಅಲೆಕ್ಸಾಂದ್ರನನ್ನು ಏಕೆ ಮುಂದಕ್ಕೆ ತಳ್ಳಿದರು? ಪೌಲನು ನಂತರದಲ್ಲಿ ಕಂಚುಗಾರನಾದ ಅಲೆಗ್ಸಾಂದ್ರನ ಕುರಿತು ನನಗೆ "ಬಹಳ ಕೇಡು ಮಾಡಿದನು" ಎಂದು ಬರೆದನು (2 ತಿಮೊಥೆ 4:14; ಇದನ್ನು ನೋಡಿರಿ 1 ತಿಮೊಥೆ 1:20). ಈ ಮನುಷ್ಯ, ಅವನೇ ಆಗಿರಬಹುದೇ[43] (ಅವನು ಯಾರೇ ಆಗಿರಲಿ) ಆ ಅಲೆಕ್ಸಾಂದ್ರನನ್ನು ಏಕೆ ನೂಕಿದರು? ಎಫೆಸದಲ್ಲಿ ಪೌಲನು ಉಂಟು ಮಾಡಿದ ಗೊಂದಲಕ್ಕೆ, ಯೆಹೂದ್ಯರು ಕಾರಣರಲ್ಲ ಎಂದು ನಿರೂಪಿಸಿದರೆ?[44] ಅಲೆಕ್ಸಾಂದ್ರನ ಉದ್ದೇಶವು ಸ್ಪಷ್ಟವಾಗಿತು.

ಬಹುಶಃ ಅಲೆಕ್ಸಾಂದ್ರನು ಉದ್ದೇಶವೇನೇ ಇರಲಿ, ಜನರ ಗುಂಪಿನ ಉದ್ದೇಶವು ಸ್ಪಷ್ಟವಾಗಿತ್ತು. ಬಹಶಃ ಅಲೆಕ್ಸಾಂದ್ರನು ಆ ಸಭೆಯ ಪ್ರಚೋದಕನಾಗಿರಲೂ ಬಹುದು; ಅವನು ಸಹ ತಪಿತಸ್ಥನಾಗಿರಬಹುದು ಎಂಬುದು ಕೆಲವರ ಅಭಿಪ್ರಾಯವಾಗಿತ್ತು. ಅಲೆಕ್ಸಾಂದ್ರಿಯನನ್ನು ವೇದಿಕೆಯು ಮೇಲೆ ಕರೆತಂದಿರಬಹುದು. ಆಗ ಅಲೆಕ್ಸಾಂದ್ರನು ಕ್ರೈಸನ್ನೆ ಮಾಡಿ ಕೂಡಿದ್ದ ಜನರಿಗೆ ಪ್ರತಿವಾದ ಮಾಡಬೇಕೆಂದಿದ್ದನು (ವಚನ 33). ಆದರೆ ಅವನಿಗೆ ಅವಕಾಶ ದೊರೆಯಲಿಲ್ಲ. "ಆದರೆ ಅವನು ಯೆಹೂದ್ಯನೆಂದು[45] ತಿಳಿದಾಗ ಎಲ್ಲರೂ ಒಂದೇ ಶಬ್ದದಿಂದ

- ಎಫೆಸದವರ ಅರ್ತೆಮೀ ದೇವಿ ಮಹಾದೇವಿ ಎಂದು ಎರಡು ಘಂಟೆ ಹೊತ್ತು ಕೂಗಿದರು" (ವಚನ 34).

ಆ ಗುಂಪಿನ ಜನರು ಅರ್ತೆಮೀ ದೇವಿಯ ಬಗ್ಗೆ ಚಿಂತನೆ ನಡೆಸಲಿಲ್ಲ, ಗೊಂದಲ ಗೊಂಡ ಜನರು ತಮ್ಮ ಗುಡಿಗಳಿಗೆ ಬೆದರಿಕೆ ಉಂಟಾದ್ದರಿಂದ, ಅವರ ಆದಾಯಕ್ಕೆ ನಷ್ಟವುಂಟಾಯಿತೆಂದು ತಿಳಿದರು. ಒಂದು ದೊಡ್ಡ ಕೈಗಾರಿಕೆಗೆ ಅಪಾಯವಾದರೆ, ಅಲ್ಲಿನ ಸ್ಥಳೀಯ ಜನರಿಗೆ ತೊಂದರೆಯಾಗುತ್ತದೆ, ಏಕೆಂದರೆ ಅವರ ಕಿಸೆಯ ಪುಸ್ತಕಕ್ಕೆ ತೊಂದರೆ ಆಗಿದ್ದರಿಂದ, ಅವರೆಲ್ಲರೂ ಗದ್ದಲ ಮಾಡಿದರು.

ಭ್ರಮೆಗೊಂಡ ಎಫೆಸದ 25,000 ಸಾವಿ ಜನರು ಎರಡು ಘಂಟೆಗಳ ಕಾಲ ಕೂಗುತ್ತಿರುವದನ್ನು ನಾನು ಊಹಿಸುತ್ತೇನೆ! ಒಂದು ರಾತ್ರಿ ನನ್ನ ಮನೆಯ ಸುತ್ತಲೂ ಇದ್ದ ನಾಯಿಗಳು ಒಟ್ಟಾಗಿ ಕೂಗುವದನ್ನು ನೆನಪು ಮಾಡಿಕೊಂಡಾಗ, ನನ್ನ ಕೂದಲುಗಳನ್ನು ಕಿತ್ತುಕೊಳ್ಳುವ ಅನುಭವವಾಯಿತು!

**ಅಕ್ರಮ, ಅಪಾಯ, ಮತ್ತು ವಜ ಮಾಡಲಾಯಿತು**

ಪಟ್ಟಣದ ಸರ್ಕಾರಿ ಆಡಳಿತ ಕಛೇರಿಯು ನಾಟಕ ಶಾಲೆಯಿಂದ ಸ್ವಲ್ಪ ದೂರದಲ್ಲಿ ಇತ್ತು.[46] ಆ ಗೊಂದಲದ ಕುರಿತು ಅಧಿಕಾರಿಗಳು ತಿಳಿದಿರಲೂ ಬಹುದು, ಆದರೆ ಅವರನ್ನು ಹತೋಟಿಗೆ ತರಲು ಪ್ರಯತ್ನಿಸದೆ, ಅವರುಗಳು ಎರಡು ಘಂಟೆಗಳ ಕಾಲ ಕೂಗಾಡಿ ಸೊರಗುವಂತೆ ಮಾಡಿದ್ದರು (ವಚನ 35). "ಕಡೆಗೆ ಪಟ್ಟಣದ ಯಜಮಾನನು"[47] ಎಂಬ ಹೇಳಿಕೆಯನ್ನು ಗ್ರೀಕ್‌ನಲ್ಲಿ, ಪತ್ರಕರ್ತನು ಎಂದು ಅರ್ಥೈಸಲಾಗಿದೆ. ಅವನು ಪಟ್ಟಣದ ಹಾಗೂ ಹೋಗುಗಳನ್ನು ದಾಖಲು ಮಾಡುವವನು ಹೇಗೂ, ಅವನು ಎಫೆಸದವರಿಗೆ ಆಪ್ತಸಹಾಯಕನಿಗಿಂತ ಹೆಚ್ಚಿನವನಾಗಿದ್ದನು. ಅವನು ಬಹು ಪ್ರಮುಖನಾದ ಪಟ್ಟಣದ ಅಧಿಕಾರಿಯಾಗಿದ್ದನು. (ಅವಿಂಗ್ ಬೈಬಲಿನಲ್ಲಿ ಪಟ್ಟಣದ ಮುಖ್ಯಸ್ಥನು) ಮತ್ತು ಆ ಸಭೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯೂ ಆಗಿದ್ದನು, ಅವನು ಎಫೆಸ ಮತ್ತು ರೋಮಾಯರ ನಡುವೆ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಯಾಗಿದ್ದನು.[48]

ಅವನು ದೇಮೇತ್ರಿಯನ ದೂರನ್ನು ನಿರೂಪಿಸುತ್ತಾ, ಆ ನಾಟಕ ಶಾಲೆಯಲ್ಲಿದ್ದ ಜನರಿಗೆ ಭರವಸೆಯನ್ನು ನೀಡಿ: "ಎಫೆಸದವರೇ, ಎಫೆಸ ಪಟ್ಟಣದವರು ಅರ್ತೆಮೀ ಮಹಾದೇವಿಯ ದೇವಸ್ಥಾನಕ್ಕೂ[49] ಆಕಾಶದಿಂದ ಬಿದ್ದ ಆಕೆಯ ಮೂರ್ತಿಗೂ ಪಾಲಕರಾಗಿದ್ದಾರೆಂಬುದನ್ನು ತಿಳಿಯದಿರುವ ಮನುಷ್ಯನು ಇದ್ದಾನೆ?" (ವಚನ 35). ನಂತರ ಅವನು ಅವರಿಗೆ ಎಚ್ಚರಿಸಿ: "ಈ ಸಂಗತಿ ಅಲ್ಲವೆನ್ನುವದಕ್ಕೆ ಯಾರಿಂದಲೂ ಆಗದಿರುವದರಿಂದ ನೀವು ಶಾಂತಿಯಿಂದಿರಬೇಕು! ದುಡುಕಿನಿಂದ ಏನೂ ಮಾಡಬಾರದು" (ವಚನ 36). NCV ಯಲ್ಲಿ "ನೀವು ಏನನ್ನಾದರೂ ಮಾಡುವಲ್ಲಿ ತಡೆದು ಯೋಚಿಸಿರಿ ಎಂಬುದಾಗಿದೆ."

ಎರಡು ಘಂಟೆಗಳ ಕಾಲ ಅವರು ಘೋಷಣೆಯನ್ನು ಕೂಗುವಾಗ, ಆ ಅಧಿಕಾರಿಯು ಆ ವಿಚಾರವನ್ನು ಪರಿಶೀಲನೆ ಮಾಡಿದ್ದನು; ಆದ್ದರಿಂದ ವಿಷಯ ತಿಳಿದವನಾಗಿ ಸಿದ್ಧನಾಗಿದ್ದನು. ಆದ್ದರಿಂದ ಅವನು ಗಾಯನನ್ನು ಹಾಗೂ ಅರಿಸ್ತಾರ್ಕನನ್ನೂ ತೋರಿಸಿ, "ನೀವು ತಂದಿರುವ ಈ ಮನುಷ್ಯರು ದೇವಸ್ಥಾನದಲ್ಲಿ ಕಳ್ಳತನ ಮಾಡುವವರಲ್ಲ, ನಮ್ಮ ದೇವಿ ಯನ್ನು ದೂಷಿಸುವವರೂ ಅಲ್ಲ" ಎಂದು ಘೋಷಿಸಿದನು. (ವಚನ 37). ಈ ಇಬ್ಬರೂ ದೂಷಿಸುವವರಲ್ಲ ಎಂದು ಹೇಳುವಲ್ಲಿ ಆ ಅಧಿಕಾರಿಯು ಸುಳ್ಳನ್ನು ಹೇಳಿದನೇ? (ಅರ್ತೆಮೀಗೆ ವಿರುದ್ಧವಾಗಿ ಮಾತನಾಡಲಿಲ್ಲ) ಅದರ ಸಾಧ್ಯತೆಗಳಿವೆ. ನೆನಪು ಇಡುವ ವಿಚಾರವೇನೆಂದರೆ (1) ಅಧಿಕಾರಿಯ, ಗೊಂದಲಕ್ಕೊಳಗಾದ ಜನರೊಂದಿಗೆ ಮಾತನಾಡುತ್ತಿದ್ದನು, ಅಲ್ಲಿ ಜರುಗಿದ ಅಂಶವನ್ನು ಅಲ್ಲಿ ಅನೇಕರು ಅರಿತಿರಲಿಲ್ಲ (ವಚನ 32); (2) ಅವನು ಆ ಮನುಷ್ಯರನ್ನು ಉಳಿಸುವ ಏರ್ಪಾಡು ಮಾಡದೆ, ಜನರನ್ನು ಶಾಂತಿಯಿಂದ ಇರಿಸಬೇಕಿತ್ತು; ಮತ್ತು

(3) ತಾನು ಕ್ರೈಸ್ತನಾಗದೆ ಇದ್ದರೂ, ತನ್ನ ಉದ್ದೇಶವನ್ನು ಈಡೇರಿಸುವದಕ್ಕಾಗಿ ಸುಳ್ಳನ್ನು ಹೇಳಬೇಕಾಯಿತು. ಒಂದು ವೇಳೆ ಅವನು ಈ ಪ್ರಸಂಗವನ್ನು ವಿಸ್ತಾರ ಮಾಡಿದ್ದರು (ವಚನ 26ಎ), ಬಹುಶಃ ಅವರು ವ್ಯಕ್ತಿಗತವಾಗಿ ಅರ್ತೆಮೀ ದೇವಿಯ ಬಗ್ಗೆ ಏನನ್ನು ಹೇಳಿರಲಾರರು. ಅವರು ವಿಗ್ರಹಗಳಿಗೆ ವಿರೋಧ ವಾದ ಮೆರವಣಿಗೆಯನ್ನಾಗಲೀ, ದೇವಸ್ಥಾನದ ಮುಂದೆ ಮನುಷ್ಯರನ್ನಾಗಲೀ ಮಾಡದೆ, ಸರಳವಾದ ಸುವಾರ್ತೆಯನ್ನೇ ಸಾರಿದ್ದರು.

ಒಂದು ವೇಳೆ ದೇಮೇತ್ರಿಯನು ಹಾಗೂ ಇತರರು ವಿರೋಧ ಮಾಡಲು ಬಯಸಿದ್ದರೆ, ಅವರು ಗೊಂದಲ ಮಾಡುವವರು ಎಂದು ಅಧಿಕಾರಿಯು ಹೇಳಲು ಸಾಧ್ಯವಿತ್ತು:

> ಹೀಗಿರುವದರಿಂದ ದೇಮೇತ್ರಿಯನಿಗೂ ಅವನ ಪಕ್ಷವನ್ನು ಹಿಡಿದಿರುವ ಕಸಬಿನವರಿಗೂ ಯಾವನ ಮೇಲಾದರೂ ಒಂದು ವ್ಯವಹಾರವಿದ್ದರೆ ನ್ಯಾಯಸ್ಥಾನಗಳುಂಟು, ಅಧಿಪತಿಗಳಿದ್ದಾರೆ,[50] ಒಬ್ಬರ ಮೇಲೊಬ್ಬರು ವ್ಯಾಜ್ಯವಾಡಿ ಕೊಳ್ಳಲಿ.[51] ಏನಾದರೂ ಹೆಚ್ಚು ವಿಚಾರಣೆ ಬೇಕಾದರೆ ಅದು ನ್ಯಾಯವಾಗಿ ನೆರದ ಸಭೆಯಲ್ಲಿ ತೀರ್ಮಾನಿಸಲ್ಪಡ ಬೇಕು[52] (ವಚನಗಳು 38, 39).

ಪಟ್ಟಣದ ಯಜಮಾನನು ಎರಡು ಉದ್ದೇಶಗಳನ್ನು ಪೂರ್ಣ ಮಾಡಿದನು. ಮೊದಲನೆಯದಾಗಿ, ಜನರು ನೀಡಿದ ದೂರನ್ನು ಸರಿಯಾಗಿಯೂ ಹಾಗೂ ಸರಿಯಿಲ್ಲದ ರೀತಿಯಲ್ಲೂ ನಿಭಾಯಿಸುವ ಕ್ರಮವನ್ನು ಕಂಡುಕೊಂಡಿದ್ದನು. ಎರಡನೆಯದಾಗಿ, ಅಲ್ಲಿ ಘರ್ಷಣೆ ಉಂಟಾದರೆ ಅದಕ್ಕೆ ಕಾರಣರಾರು ಎಂಬುದನ್ನು ಆ ಕಸಬುದಾರರು ತಿಳಿಯುವಂತೆ ಮಾಡಿದನು.

ಆ ಅಧಿಕಾರಿಯು, ಅಲ್ಲಿ ಉಂಟಾಗಬಹುದಾದ ಪರಿಣಾಮದ ಕುರಿತು ಮುನ್ಸೂಚನೆಯನ್ನು ನೀಡಿದನು: "ಈ ದಿನ ನ್ಯಾಯವಾದ ಕಾರಣವಿಲ್ಲದೆ ನೆರೆದ ಕೂಟದ ವಿಷಯದಲ್ಲಿ ಇದು ಒಂದು ದಂಗೆ ಎಂಬುದಾಗಿ ನಮ್ಮ ಮೇಲೆ ತಪ್ಪು ಹೊರಿಸುವದಕ್ಕೆ ಆಸ್ಪದವಾಯಿತು. ಈ ದೊಂಬಿಯನ್ನು ಕುರಿತು ವಿಚಾರಣೆ ನಡೆದರೆ ನಮ್ಮಿಂದ ಉತ್ತರ ಕೊಡುವದಕ್ಕೆ ಆಗುವದೇ ಇಲ್ಲ ಎಂದು ಹೇಳಿ ದನು" (ವಚನ 40). ಈ ಮಾತುಗಳ ಹಿಂದಿನ ಶಕ್ತಿಯನ್ನು ಅರಿಯುವುದಾದರೆ, ದಂಗೆಯ ಕುರಿತು ರೋಮಾಯರು ಹೊಂದಿದ್ದ ಮನೋಭಾವವನ್ನು ಅರ್ಥಮಾಡಿಕೊಳ್ಳಬೇಕು. ರೋಮಾಯರ ದೃಷ್ಟಿಯಲ್ಲಿ, ಕೆಲವು ಅಪರಾಧಿಗಳು, ಸಾರ್ವಜನಿಕ ಅಪರಾದಗಳಿಗಿಂತ ಕೆಟ್ಟವುಗ ಳಾಗಿದ್ದವು (ದಂಗೆ ಏಳುವುದು ಸಾರ್ವಜನಿಕ ಅಪರಾಧ) ಎಫೆಸವು ಸ್ವತಂತ್ರ ಪ್ರಾಂತವಾಗಿದ್ದು, ಅನೇಕ ಒಳಿತುಗಳನ್ನು ಅನುಭವಿಸಿತ್ತು. ಈ ದಂಗೆಯ ಕುರಿತು, ರೋಮಾಯರಿಗೆ ತಿಳಿದು ಬಂದಿದ್ದರೆ, ಕೆಲವರು ಅಥವ ಅವರೆಲ್ಲರೂ ನಾಶವಾ ಗುವ ಸಾಧ್ಯತೆಯಿತ್ತು. ರೋಮಾಯರ ದಂಡು ಬಂದು ಆ ಪಟ್ಟಣವನ್ನು ಆಕ್ರಮಿಸುವ ಸಾಧ್ಯತೆಯಿತ್ತು. ಅಪರಾದಿಗಳನ್ನು ಶಿಕ್ಷಿಸಿ, ದಂಡವನ್ನು ವಿಧಿಸಲಾಗುತ್ತಿತ್ತು. (ಇದಕ್ಕೆ ಪಟ್ಟಣದ ಅಧಿಕಾರಿಯು ಹೊರತಾಗಿರುವದಿಲ್ಲ), ಅವರ ಸುಂಖವನ್ನು ಹೆಚ್ಚಿಸುತ್ತಿದ್ದರು, ಸಂಘಗಳನ್ನು ನಿಷೇಧಿಸುತ್ತಿದ್ದರು. ಇನ್ನೊಂದು ಪದದಲ್ಲಿ ಹೇಳುವದಾರೆ, ಬೆಳ್ಳಿಯ ಅಕ್ಕಸಾಲಿಗನಾದ ದೇ ಮೇತ್ರಿಯನು ಯಾವುದಕ್ಕಾಗಿ ಹೋರಾಟ ಮಾಡುತ್ತಿದ್ದನೋ, ಆ ಕಿಸೆಯ ಪುಸ್ತಕವು ಪುನಃ ನಷ್ಟವಾಗುವ ಸಾಧ್ಯತೆಯಿತು!

ಅಧಿಕಾರಿಯು ತನ್ನ ಮಾತುಗಳನ್ನು ಅಂತ್ಯಗೊಳಿಸಿದಾಗ, ಆ ದಂಗೆಕೋರರ ಗುಂಪು ಪ್ರಶಾಂತವಾಗಿತ್ತು, ನಂತರ "ಅವನು ಸಭೆಯನ್ನು ಮುರಿದನು" (ವಚನ 41). ಜನರು ಮೌನವಾಗಿ ತಲೆ ತಗ್ಗಿಸಿರುವದನ್ನು ನಾನು ನೋಡುತ್ತೇನೆ, ಮತ್ತು ನಾಟಕ ಶಾಲೆಯಿಂದ ದೂರ ಹೋಗುವದನ್ನೂ ನೋಡುತ್ತೇನೆ, ಮತ್ತು ಆ ಪಟ್ಟಣದ ಯಜಮಾನನು ತನ್ನ ಮುಂದಲೆಯ ಬೆವರನ್ನು ಓರೆಸಿಕೊಳ್ಳುವದನ್ನು ನೋಡುತ್ತೇನೆ, ನಂತರ ಅವನು ಈ ಸಂಗತಿಯು ಮುಗಿದ ಮೇಲೆ ತನ್ನ ಕಛೇರಿಗೆ ಹಿಂದಿರುಗಿದನು. ಅವನ ಯೋಚನೆ ಏನಿರಬಹುದೆಂದರೆ, "ಇದನ್ನು

ನಾನು ಪ್ರತಿನಿತ್ಯ ಮಾಡುವ ಅಗತ್ಯವಿಲ್ಲ" ಮತ್ತು ನಾನು ಮಾಡುವ ಈ ಕಾರ್ಯಕ್ಕೆ ಯಾರೂ ನನಗೆ ಹೆಚ್ಚಾದ ಹಣವನ್ನು ಸಂದಾಯ ಮಾಡುವದಿಲ್ಲ ಎಂದು ತಿಳದಿರಬಹುದು!

ಈಗ ಗಾಯನ ಹಾಗೂ ಅರಿಸ್ತಾರ್ಕನ ಪರಿಸ್ಥಿತಿ ಏನಾಯಿತು, ಪೌಲನ ಈ ಸಂಗಡಿಗರನ್ನು ಜನರು ಆ ನಾಟಕ ಶಾಲೆಗೆ ಎಳೆದೊಯ್ದಿದ್ದರು? ಒಂದು ವೇಳೆ ಅವರಿಂದ ಅಪರಾದ ಪತ್ರವನ್ನು ಬರೆಸಿಕೊಂಡು ಅವರನ್ನು ಬಿಡುಗಡೆ ಮಾಡಿರಬಹುದು ಯಾಕೆಂದರೆ ಮುಂದಿನ ಅಧ್ಯಾಯದಲ್ಲಿ ಅವರು ಪೌಲನೊಂದಿಗೆ ಪ್ರಯಾಣ ಮಾಡಿದರು[53] (20:3, 4).

ಅದು ಮತ್ತೊಂದು ಜಯದ ದಾರಿಯಾಯಿತು. ಇನ್ನೊದು ಸಾರಿ ವಿಶ್ವಾಸಿಗಳಿಗೆ ಜಯವುಂಟಾಯಿತು ಮತ್ತು ವಿರೋಧಿಗಳು ತಣ್ಣಗಾದರು ಕ್ರೈಸ್ತರನ್ನು ಹೊರತು ಪಡಿಸಿ, ಅವರ ವಿರೋಧಿಗಳಿಂದಲೇ ಸಮಾಜಕ್ಕೆ ತೊಂದರೆಯಾಯಿತು ಎಂದು ಲೂಕನು ತನ್ನ ಓದಗರಿಗೆ ತಿಳಿಸಿರುವನು.

## ಮುಕ್ತಾಯ

ಈ ದಂಗೆಯ ನಿಮಿತ್ತವಾಗಿ, ಪೌಲನು ತಾನು ಯೋಜನೆಯನ್ನು ಮುಂದುವರಿಸಬೇಕೆಂದು ನಿರ್ಧರಿಸಿದನು: ಅದು ಎಫೆಸವನ್ನು ಬಿಟ್ಟು ಹೋಗುವದೇ ಅಲ್ಲಿ ಅವನಿಗೆ ತೆರೆದಿದ್ದ ಬಾಗಿಲು (1 ಕೊರಿಂಥ 16:9). ಮುಚ್ಚಲ್ಪಟ್ಟಿತು. ಆದ್ದರಿಂದ, "ಗದ್ದಲವು ನಿಂತ ತರುವಾಯ ಪೌಲನು ಶಿಷ್ಯರನ್ನು ಕೂಡ ಕರೆಸಿ ಧೈರ್ಯಗೊಳಿಸಿ ಅವರ ಅಪ್ಪಣೆ ತೆಗದುಕೊಂಡು ಮೆಕೆದೋನ್ಯಕ್ಕೆ ಹೊರಟನು" (20:1).

ಎಫೆಸದವರ ದಂಗೆಯ ಕೃತ್ಯದಿಂದ ಅನೇಕ ಪಾಠಗಳನ್ನು ನಾವುಗಳು ಕಲಿಯಬಹುದು. ಶಿಲುಬೆಯ ವಿರೋಧಿಗಳಿಗೆ, ಸುವಾರ್ತೆಯ ಶಕ್ತಿ ಏನು ಎಂಬ ಅರಿವಾಯಿತು. ಸುವಾರ್ತೆಯು, ಅರ್ತೆಮೀದೇವಿಯ ಪೂಜೆಗೆ ಅಡಚಣೆಯಾಯಿತು ಎಂಬ ದೇಮೇತ್ರಿಯನ ಮಾತು ಸತ್ಯವಾಯಿತು. ಒಂದು ಕಾಲದಲ್ಲಿ ವೈಭವ ಹೊಂದಿದ್ದ ಅರ್ತೆಮೀ ಗುಡಿಯು, ಇಂದು ನಾಶವಾಗಿ, ಅದರ ಒಂದೇ ಒಂದು ಕಂಬವು ನಿಂತಿದೆ, ಅವರ ಮೇಲ್ಭಾಗದಲ್ಲಿ ಕೊಕ್ಕರೆಯು ಗೂಡನ್ನು ಮಾಡಿರುತ್ತದೆ.

ಈಗಿನ ಕಾಲದ ಜನರಿಗೆ ಇರುವ ಪಾಠವೇನೆಂದರೆ, ಹಣದಾಶೆಯಿಂದ ದೂರವಿರಬೇಕೆಂದು ತಾತ್ಕಾಲಿಕವಾದ ಎಚ್ಚರಿಕೆ ನೀಡಲಾಗಿದೆ. ಹಣವು ಒಂದು ಆಯುಧ ಅಥವಾ ಒಂದು ವಿಗ್ರಹವಾಗಲು ಸಾಧ್ಯವಿದೆ. ನಾವು ದೇವರನ್ನು ಆರಾಧಿಸಲೂ ಬಹುದು ಮತ್ತು ಆತನ ಸೇವೆಗಾಗಿ ಬಳಸಲೂ ಬಹುದು. ಅಥವಾ ಹಣವನ್ನೇ ಆರಾಧಿಸಿ ಧಾರ್ಮಿಕ ಕಾರ್ಯಗಳ ಮೂಲಕ ಅಧಿಕ ಹಣವನ್ನು ಮಾಡಬಹುದು. ಒಂದು ಕ್ಷಣ ನಿಂತು, ದೇಮೇತ್ರಿ ಮತ್ತು ಅವನ ಕಸಬುದಾರರು ಪ್ರಮುಖವೆಂದು ಪರಿಗಣಿಸಿದ ಸರ್ವಶಕ್ತ ಹಣದ ಕುರಿತು ಯೋಚಿಸಿರಿ; ನಂತರ ಕನ್ನಡಿಯಲ್ಲಿ ನಿಮ್ಮನ್ನೇ ನೋಡಿಕೊಳ್ಳಿರಿ. ಹಣದ ಕುರಿತು ನಮ್ಮ ಮನೋಭಾವನೆ ಏನು? ಕ್ರಿಸ್ತನ ಸೇವೆಗಾಗಿ ಹಾಗೂ ಇತರರಿಗೆ ಸಹಾಯ ಮಾಡುವ ಅವಕಾಶ ದೊರಕುವಾಗ, ಏನು ಮಾಡುವಿರಿ? (ಅದರ ಬಗ್ಗೆ ಸ್ಪಷ್ಟತೆ ಇಲ್ಲದೆ ಹೋದರೆ, ಉದಾರವಾಗಿ ನೀಡಿರಿ, ನಂತರ ಅದರ ಆನಂದವನ್ನು ಕಾಣುವಿರಿ!) ಕ್ರೈಸ್ತತ್ವವು ನಮ್ಮ ಕಿಸೆಯ ಪುಸ್ತಕವನ್ನು ಬಯಸುವಾಗ, ಯುಕ್ತಿಗಿಂತಲೂ ಮುಗುಳ್ನಗೆಯು ಮೂಡುತ್ತದೆ ಎಂಬುದು ನನ್ನ ಪ್ರಾರ್ಥನೆ.[54]

---

ಟಿಪ್ಪಣಿಗಳು

[1]ಸ್ಥಳೀಯ ಕೇಳುಗರ ಅನುಗುಣವಾಗಿ ಹೋಲಿಕೆ ಮಾಡಬೇಕು. ಹೆಚ್ಚಿನ ರೋಮಾಯರ ಪ್ರಾಂತವು ಪಾಶ್ಚಿಮಾತ್ಯ ಕರಾವಳಿಯನ್ನು ಹೊಂದಿರುತ್ತದೆ, ಈ ದಿನ ಅದನ್ನು ಟರ್ಕಿ ಎಂದು ಕರೆಯುವರು.
[2]ಎಫೆಸದ ಸಭೆಯೊಂದಿಗೆ, ಅದೇ ಸಮಯದಲ್ಲಿ ಆಸ್ಯ ಸೀಮೆಯ ಏಳು ಸಭೆಗಳು (ಪ್ರಕಟನೆ 1-3) ಸ್ಥಪನೆಗೊಂಡವು ಹಾಗೂ ಕೊಲೊಸ್ಸೆ ಮತ್ತು ಹಿರಿಯಾ ಪೋಲೆಯನ್ನು ಸಭೆಗಳು ಸ್ಥಾಪನೆಗೊಂಡವು.

[3]ಕೊರಿಂಥ 11:28 ಸಭೆಗಳಿಗಿದ್ದ ಪೌಲನ ಚಿಂತನೆ. ಕೊರಿಂಥವನ್ನು ಹಾಗೂ ಇತರೆ ಸಭೆಗಳ ಚಿಂತನೆಗೆ ಅವಾಶ ಪಡಕೊಂಡೆನು. [4]1 ಕೊರಿಂಥ 5:9 ಕೊರಿಂಥದ ಮತ್ತು ಮುಂದಿನ ವಿಷಯಗಳನ್ನು 2 ಕೊರಿಂಥಕ್ಕಾಗಿ ಮುಂಗಡ ವಾಗಿ ಕಾಯ್ದಿರಿಸಿದ್ದು ಎಂಬುದು ಕೆಲವರ ನಂಬಿಕೆ. 1 ಕೊರಿಂಥದ ದೇವರ ಮತ್ತು ಇತರ ವಿಷಯಗಳನ್ನು 2 ಕೊರಿಂಥದಲ್ಲಿ ವಿಸ್ತರಣೆ ಮಾಡಲಾಗಿದೆ, ಆದ್ದರಿಂದ ಕಾಯ್ದಿರಿಸುವ ಪ್ರಮೇಯವಿರಲಿಲ್ಲ. ಪ್ರೇರಿತ ಗೊಂಡವರ ಸಕಲ ಮಾತುಗಳು ಹೊಸ ಒಡಂಬಡಿಕೆಯಲ್ಲಿರದ, ನಮಗೆ ಅಗತ್ಯವಿರುವ ಮಾತುಗಳು ಉಂಟಷ್ಟೆ (ಕೊಲೊಸ್ಸೆ 4:16). [5]ಇದು ಅವನ ಮೂರನೆ ಸಂದರ್ಶನದ ಉಲ್ಲೇಖ. ಎರಡನೆ ಪ್ರಯಾಣದ ಅಂತ್ಯದಲ್ಲಿ ಅವರನ್ನು ಸಂಧಿಸಿ, ಮೂರನೆಯ ಪ್ರಯಾಣದ ಅಂತ್ಯದಲ್ಲಿಯೂ ಅವರನ್ನು ಸಂಧಿಸಿದನು, ಅವನು ಎಫೆಸದಲ್ಲಿ ವಾಸಿಸಿ ಕೆಲಸ ಮಾಡುವ ಸಮಯದಲ್ಲಿರಬಹುದು. [6]ಪೌಲನ ಮನಸ್ಸಿನಲ್ಲಿ ಅನೇಕ ರೋಗದ ಕುರಿತ ಆಲೋಚನೆಯಿರಬಹುದು. [7]ಪ್ರಾಣಿಗಳಂತೆ ವರ್ತಿಸಿದ ಜನರ ಕುರಿತು "ಕಾಡುಮೃಗ" ಎಂದಿರಬಹುದು, ರೋಮಾದ ನಿಯಮದ ಪ್ರಕಾರ "ಕಾಡು ಪ್ರಾಣಿಗಳೊಂದಿಗೆ ಹೋರಾಡುವದು ಪೌಲನಿಗೆ ನಿಷೇಧವಾಗಿತ್ತು." [8]ಪೌಲನು ರೋಮಾ ಪತ್ರಿಕೆಯನ್ನು ಬರೆದಾಗ, ಕೊರಿಂಥ ಮತ್ತು ಎಫೆಸದಲ್ಲಿ ಅಕ್ವಿಲ ಮತ್ತು ಪ್ರಿಸ್ಕಿಲ್ಲರ ಒಡನಾಟದಲ್ಲಿರಬಹುದು. ಏಕೆಂದರೆ ಕೊರಿಂಥದಲ್ಲಿ ಪೌಲನಿಗಾಗಿ ಅವರು ಅಪಾಯಕ್ಕೆ ಒಳಗಾದರು ಎಂಬ ಸೂಚನೆಗಳಿರುವದಿಲ್ಲ. ಒಂದು ವೇಳೆ ಅದು ಎಫೆಸದಲ್ಲಿ ಸಂಭವಿಸಿರಬಹುದು. [9](19:23-41) ನಾಟಕ ಶಾಲೆಯಲ್ಲಿ ಗೊಂದಲ ಉಂಟುಮಾಡಿದ ಜನರ ಕುರಿತು ಪೌಲನು "ಕಾಡುಮೃಗಗಳ" ಹೋರಾಟ ಎಂದು ಕರೆದಿರಬಹುದು, ಈ ಘಟನೆಯ ಮೊದಲೇ 1 ಕೊರಿಂಥ ಪತ್ರವನ್ನು ಬರೆದಿರಬಹುದು (ವಚನಗಳು 30, 31). ಪೌಲನು ಆ ನಾಟಕ ಶಾಲೆಗೆ ಹೋಗಿರುವ ಸಾಧ್ಯತೆಯಿಲ್ಲ. ಲೂಕನು ಅದನ್ನು ತಿಳಿಸಿರುವದಲ್ಲ. ಒಂದು ವೇಳೆ ಅಲ್ಲಿ ಮತ್ತೊಂದು ಘಟನೆಯು ಜರುಗಿರಬಹುದು. [10]ಆಯ್ಕೆಗೆ ಒಳಪಡದೆ "ಖಂಡಿತವಾಗಿ" ಮಾಡಬೇಕು ಎಂಬುದು ಪೌಲನ ತತ್ವ.

[11]NKJV "ಆತ್ಮದಲ್ಲಿ ನಿರ್ಧರಿಸಿದನು" [12]ಸಭೆಗಳನ್ನು ಪುನಃ ಸಂಧಿಸುವದು ಪೌಲನ ಪದ್ಧತಿಯಾಗಿತ್ತು (14:22, 23; 15:36, 41; 18:23). ಇಲ್ಲಿಯವರೆಗೂ, ಅವನು ಎರಡನೆಯ ಪ್ರಯಾಣದಲ್ಲಿ ಸ್ಥಾಪಿಸಿದ್ದ ಸಭೆಗಳನ್ನು ಇನ್ನೂ ಸಂಧಿಸಿರಲಿಲ್ಲ. ಕೊಂರಿಂಥವನ್ನು ಹರತುಪಡಿಸಿ. [13]*ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದಲ್ಲಿ 16:12ರ ಟಿಪ್ಪಣಿ. [14]ರೋಮಾಯವನ್ನು ಸಂಧಿಸಿ, ಸ್ಪೇನ್‌ಗೆ ಹೋಗಲು ತಯಾರಾಗಿದ್ದನು (ರೋಮಾಪುರ 15:22-24) (ಕ್ರೈಸ್ತರನ್ನು ಉತ್ತೇಜಿಸಲು, ರೋಮಾಯಕ್ಕೆ ಹೋಗಿದ್ದನು). [15]ಬಂದ ಸಂದೇಶಕನು, ಈ ಹಿಂದೆ ಬಂದವರ ಕುರಿತು, ಕ್ಲೋಯಜನರಿಂದ ವರದಿ ಪಡೆದದು, ಮೂರು ಪ್ರತ್ಯೇಕ ಘಟನೆಗಳಾಗಿವೆ. ಕ್ಲೋಯೆ (ಯಾರೇ ಆಗಿರಬಹುದು) ಸಂದೇಶಕ ರೊಟ್ಟಿಗೆ ಸಭೆಯ ಪತ್ರವನ್ನು ಕಳುಹಿಸಿದಳು. [16]ಸೊಸ್ಥೆನನು ಕೊರಿಂಥ ಸಭಾಮಂದಿರದ ಅಧಿಕಾರಿಯಾಗಿದ್ದನು (18:17). ಇನ್ನೊಬ್ಬ ಸೊಸ್ಥೆನನ ಸಂಬಂಧವನ್ನು ಅರಿತಿರುವದಿಲ್ಲ. [17]1 ಕೊರಿಂಥ 16:21ರ ಪ್ರಕಾರ, ಪತ್ರದ ಅಧಿಕಾಂಶವನ್ನು ಪೌಲನು ತನ್ನಸ್ವಂತ ಕೈಯಿಂದ ಬರೆದಿರುವದಿಲ್ಲ ಎಂಬ ಸೂಚನೆಯಿದೆ ಅಲ್ಲಿ ಸಹ ಬರವಣಿಗೆಗಾರರನ್ನು ಬಳಸಲಾಗಿದೆ (ಉದಾಹರಣೆ 1 ಕೊರಿಂಥ 1:1, 2). ಅವನು ಹೇಳಿ ಬರೆಸಿದನು. [18]ಅವರು ಪೌಲನ ಬರುವಿಕೆಗಾಗಿ ಸಿದ್ಧಪಡಿಸಿರಬಹುದು, ಮತ್ತು ಯೆರೂಸಲೇಮಿನವರ ಸಹಾಯಕ್ಕಾಗಿಯೂ ಸಿದ್ಧರಾಗಿರಬಹುದು. [19]ಎರಸ್ತನು ಪಟ್ಟಣದ "ಖಜಾನಾಧಿಕಾರಿಯಾಗಿರಬಹುದು" ರೋಮಾಪುರ 16:23 (ಇದನ್ನು ಸಹ ನೋಡಿರಿ 2 ತಿಮೊಥೆ 4:20). ಅದಕ್ಕಾಗಿ ಅವನನ್ನು ಪೌಲನು ಕಳುಹಿಸಲಿಲ್ಲ ಅವನು ಮನೆಗೆ ಹೋದನು ಎಂದಿದೆ. [20]ಇತರೆ ಘಟನೆಗಳ ಸೂಚನೆಯಿದೆ. ತಿಮೊಥೆಯನು ಪತ್ರಿಕೆಯೊಂದಿಗೆ ಸಭೆಗೆ ಹಿಂದಿರುಗಾರು ಪೌಲನು ಕೇಳಿರಬಹುದು. ತಿಮೊಥೆ ಸಂದರ್ಶನವನ್ನು ಮುಂದುವರಿಸಲಿ, ತೀತನನ್ನು ಕಳುಹಿಸಿರಬಹುದು. ನಂತರ ಸಂಬಂದವಿಲ್ಲದ ಪ್ರಯಾಣಿದಲ್ಲಿ ಎರಸ್ತನನ್ನು ಮತ್ತು ತಿಮೊಥಿಯನ್ನು ಮೆಕೆದೋನ್ಯಕ್ಕೆ ಕಳುಹಿಸಿರಬಹುದು (ಲೂಕನು ತೀತನ ಕುರಿತು ಅಪೊಸ್ತಲರ ಕೃತ್ಯದಲ್ಲಿ ತಿಳಿಸಿದಂತೆ ಇತರೆ ಮೂಲಗಳಿಂದ ಕಾರಣವನ್ನು ಹುಡುಕಬೇಕು).

[21]ಪೌಲನು ಎಫೆಸವನ್ನು ಬಿಡುವ ಮೊದಲು, ತೀತನ ಮೂಲಕ ಕೊರಿಂಥದ ವಿಚಾರವನ್ನು ಅರಿತು (2 ಕೊರಿಂಥ 2:12, 13), ದಂಗೆ ಉಂಟಾದಾಗ ಆ ಸ್ಥಳವನ್ನು ಬಿಟ್ಟನು. [22]ಅರ್ತೆಮೀ ದೇವಿಯ ಹಬ್ಬದ ಸಮಯದಲ್ಲಿ, ದಂಗೆ ಉಂಟಾಗಿರಬಹುದು ಎಂಬ ಸಂದೇಹವಿದೆ. ಅದು ಪಂಚಾಶತ್ತಮದಿನದಂದೇ ನಡೆದಿರಬಹುದು (1 ಕೊರಿಂಥ 16:8, 9). [23]ಕ್ರೈಸ್ತತ್ವದ ಕುರಿತು, "ಮಾರ್ಗ" ಎಂಬ ಹೇಳಿಕೆಯನ್ನು ಲೂಕನು ಮೆಚ್ಚಿರುವನು (9:2; 19:9, 23; 22:4; 24:14, 22). [24]3 ಯೋಹಾನ 12ರಲ್ಲಿ ಇನ್ನೊಬ್ಬ ದೇಮೇತ್ರಿಯನ ಹೆದರಿದೆ, ಒಂದು ವೇಳೆ ಇಬ್ಬರೂ ಒಂದೇ ಆಗಿರಬಹುದು. [25]ಟೆಕ್ರಾ - ಕೂಟ ಗುಡಿಗಳಂತೆ, ಅರ್ತೆಮೀ ಗುಡಿಗಳು ದೊರಕಿರುವದಿಲ್ಲ ಅರ್ತೆಮೀ ಪೂಜೆಯು ಇಲ್ಲವಾದಾಗ, ಆ ಬೆಳ್ಳಿಯ ಗುಡಿಗಳನ್ನು ಕರಗಿಸಿರಬಹುದು ಎಂಬುದು ನನ್ನ ಊಹೆ. [26]ಅರ್ತೆಮೀಯಾ ಮೂವತ್ತು ಪೂಜಾ

ಸ್ಥಳಗಳನ್ನು ಕಂಡುಹಿಡಿಯಲಾಗಿದೆ. ನಾನು ಟರ್ಕಿಯ, ಸಾರ್ದಿಸನ್ನು ಸಂದರ್ಶಿಸಿದಾಗ, ಅರ್ತೆಮಿಗೆ ಸಂಬಂಧ ಪಟ್ಟ ಅಳಿದು ಉಳಿದಿರುವ ಸ್ಥಳವನ್ನು ನೋಡಿ ದನು. [27]ಅದರ ಮುಖಚರ್ಯವನ್ನು ಉತ್ತಮ ಪಡಿಸಲು, ಕೆಲವು ಕಲಾಕಾರರು ಕೆಲಸ ಮಾಡಿರಬಹುದು. [28]ಪಾರ್ಥನಾಕ್ಕಿಂತ ಅದು ನಾಲ್ಕು ಪಟ್ಟು ದೊಡ್ಡದಾಗಿತ್ತು. [29]ನೆನಪಿನ ಗ್ರಂಥಗಳು ಓದುಗರಿಗೆ ಪರಿಚಯವಿರುವ ಸಂಗತಿ. [30]ಇದು ಏಷ್ಯ ಖಂಡವಲ್ಲ, ರೋಮಾಯದ ಆಸ್ಯ ಸೀಮೆ.

[31]ದೇಮೇತ್ರಿಯು ಸಂಕಟಕ್ಕೊಳಗಾದ ಕುರಿತು ಸ್ಥಳೀಯವಾದ ಉದಾಹರಣೆ ನೀಡಬಹುದು ಅಮೇರಿಕ ಮತ್ತು ಇತರ ಪ್ರದೇಶಗಳಲ್ಲಿ ಕ್ರಿಸ್‌ಮಸ್‌ನ್ನು ನಿರಾಕರಿಸಿದರೆ, ಪ್ರತಿರೋಧ ಉಂಟಾಗುತ್ತದೆ. [32]ಪ್ಲಿಂಟಿ ದಿ ಯಂಗರ್ ಕ್ರಿ.ಪೂ. 100ರಲ್ಲಿ ರೋಮನ್ ಸೆನೇಟರ್ ಆಗಿ ಕಾರ್ಯ ಮಾಡಿದವನು (ಕಿ.ಪೂ. ಹೊಲಿಸು 61 - ಹೋಲಿಸು 112). ನಂತರ ಬಿಥೂನ್ಯದ ರಾಜ್ಯಪಾಲನಾಗಿದ್ದನು; ನಂತರ ತ್ರಾಜಾನನ ಸಮಕಾಲಿನವನು, ಕ್ರೈಸ್ತರ ಪ್ರಾಂತಕ್ಕೆ ಅನುಗುಣ ವಾಗಿ ಪ್ರಶ್ನೆ ಕೇಳಬೇಕು. [33]"ಮೆಕೆದೋನ್ಯದ" ಗಾಯನ ಕುರಿತು ಪರಿಚಯವಿಲ್ಲ ಊಹೆಗಳು ಮಾತ್ರ ಇವೆ (ಅಪೊಸ್ತಲರ ಕೃತ್ಯಗಳು 20:4; ರೋಮಾಪುರ 16:23; 1 ಕೊರಿಂಥ 1:14; 3 ಯೋಹಾನ 1). 19:29ರ ಗಾಯನ ಮತ್ತು 20:4ರ ಗಾಯನೂ ಒಬ್ಬನೇ ಎಂಬುದು ಕೆಲವರ ಅಭಿಪ್ರಾಯ (ದುಬೇರೆ ಎಂಬ ಮೆಕೆದೋನ್ಯ ಪಟ್ಟಣ), ದೆರ್ಬೆಯವನಲ್ಲ ಎಂಬುದೇ. [34]ಅರಿಸ್ತಾರ್ಕನು ಥೆಸಲೋನಿಕದವನು, ಅದು ಮೆಕೆದೋನ್ಯದ ರಾಜಧಾನಿ (ಅಪೊಸ್ತಲರ ಕೃತ್ಯಗಳು 20:4). ಅವನು ಪೌಲನೊಂದಿಗೆ ಯೆರೂಸಲೇಮಿಗೆ ಪ್ರಯಾಣಿಸಿದನು, ನಂತರ ರೋಮಾಯಕ್ಕೂ ಹೋದನು (ಅಪೊಸ್ತರ ಕೃತ್ಯಗಳು 27:2). ನಂತರ ಪೌಲನು ರೋಮಾಯರಿಗೆ ಬರೆದಾಗ, "ಜೊತೆ ಸೆರವಾಸಿಯಾದ ಅರಿಸ್ತಾರ್ಕನು ಎಂದು ಬರೆದಿರುವನು" (ಕೊಲೊಸ್ಸೆ 4:10; ಫಿಲೆಮೋನ 24). [35]19:29 ಉಲ್ಲೇಖಕ್ಕಿಂತ ಹಿಂದೆ, ಆ ಇಬ್ಬರು ಪೌಲನೊಂದಿಗೆ, ಎಲ್ಲಿ ಏಕೆ ಪ್ರಯಾಣಿಸಿದರು ಎಂಬುದು ಇರುವದಿಲ್ಲ. [36]ಅಮೇರಿಕೆಯಲ್ಲಾಗಿದ್ದರೆ, ಜೀವವಿಮಾ ಸಂಸ್ಥೆಯವನು ಅವನನ್ನು "ಬಡಪಾಯಿಗಳು" ಎಂದು ಕರೆದಿರಬಹುದು. [37]"ಸಭೆ" ಎಂಬುದು ಇಲ್ಲಿ ಉತ್ತಮವಾದ ಅನುವಾದವಾಗಿರುವದಿಲ್ಲ. ಗ್ರೀಕನ "ಎಕ್‌ಲೀಸಿಯಾ" ಎಂಬ ಪದದ ಅರ್ಥವನ್ನು ಇಲ್ಲಿ ನೀಡಿರುವದಿಲ್ಲ (ವಚನ 32), ಆದರೆ "ದೇಮಸ್" ಅಂದರೆ ಜನರು "ಜನ ಸಭೆಗೆ" ಅದನ್ನು ಬಳಸಲಾಗಿದೆ (ಈ ಪುಸ್ತಕದ 17:5ರ ಟಿಪ್ಪಣಿ ನೋಡಿರಿ). ಅವರು ಒಂದು ಜನರ ಗುಂಪಿನ ಸಭೆಯೆಂದು ಪೌಲನು ತಿಳಿದಿರಬಹುದು. [38]ಲೂಕನು ಸರಿಯಾದ ಹೇಳಿಕೆಯನ್ನು ನೀಡಿರುವನೆಂದು ಭೂವಿಜ್ಞಾನಿಗಳು ಸಾಬೀತು ಪಡಿಸಿರುವರು. [39]*Bagster's Analytical Greek Lexicon* (1972), s.v. "Asiarchs." [40]ಅಧಿಕಾರಿಗಳು, ಕ್ರೈಸ್ತತ್ವಕ್ಕೆ ಕರುಣೆ ತೋರಿದರ ನಿಮಿತ್ತ, ಅದು ಯಾರಿಗೂ ತೊಂದರೆ ನೀಡುವ ಗುಂಪಾಗಿರಲಿಲ್ಲವೆಂಬುದು ಸಾಭೀತಾಯಿತು.

[41]"ಎಕೆಲೀಸಿಯಾ" ಎಂಬ ಪದದಿಂದ "ಸಭೆ" ಎಂದು ಇಲ್ಲಿ ತರ್ಜುಮೆ ಮಾಡಲಾಗಿದೆ. ವಚನ 32, 39, ಮತ್ತು 41ರಲ್ಲಿ ಮತ ರಹಿತ ಅರ್ಥದಲ್ಲಿ ಬಲಸಲಾಗಿದೆ. "ಸಭೆ" ಎಂಬ ಪದಕ್ಕೆ *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿರುವ *"ಪದಗಳ ಪಟ್ಟಿ: ಭಾಗ ಎರಡು"* ನೋಡಿ. [42]ಹೊಸ ಒಡಂಬಡಿಕೆಯಲ್ಲಿ ಉಂಟಾದ ಅನೇಕ ವಿರೋಧಕ್ಕೆ ಜನರ ಅಜ್ಞಾನವೇ ಕಾರಣವಾಗಿತ್ತು. [43]2 ತಿಮೊಥೆ 4:14 ಅಲೆಕ್ಸಾಂದ್ರನೂ 1 ತಿಮೊಥೆ 1:20ರ ಅಲೇಕ್ಸಾಂದ್ರನೂ ಒಬ್ಬನೇ. ಅವನು ಕ್ರೈಸ್ತನಾದನು ಎಂದು ಪೌಲನು ತಿಳಿಸಿರುವನು, ನಂತರ ಅವನು ಬಿದ್ದು ಹೋದನು. ತಿಮೊಥಿಯು (1 ಕೊರಿಂಥ 1:3) ಎಫೆಸದಲ್ಲಿರುವಾಗ, ಪೌಲನು ಈ ಪತ್ರಿಕೆಯನ್ನೂ ಬರೆದಿರುವದರಿಂದ, ಅಲೆಕ್ಸಾಂದ್ರನು ಎಫೆಸದವನಾಗಿರಬಹುದು. ಲೂಕನು ಅವನ ಹೆಸರನ್ನು ತಿಳಿಸಿರುವದರಿಂದ, ಅವನ ಓದುಗರಿಗೆ ಅವನ ಪರಿಚಯವಿದ್ದಿರಬಹುದು. [44]ಎಫೆಸದ ಯೆಹೂದ್ಯರು "ಜೀವಿಸಿರಿ, ಜೀವಿಸಲು ಬಿಡಿರಿ" ಎಂಬ ಹೇಳಿಕೆಯನ್ನು ಹೊಂದಿದ್ದರು. ವಿಗ್ರಹಾರಾಧನೆಗೂ ಈ ಸ್ವಾತಂತ್ರವನ್ನು ನೀಡಿದ್ದರು, ಅದನ್ನು ದೇವರು ಒಪ್ಪಿರುವದಿಲ್ಲ. [45]ಯೋಸೇಫಸನ ಪ್ರಕಾರ ಎಫೆಸದ ನಾಗರೀಕರು ಯೆಹೂದ್ಯರನ್ನು ಇಷ್ಟಪಡಲಿಲ್ಲ. ಅವರು ಅಲೆಕ್ಸಾಂದ್ರನ ಉಡುಪನ್ನು ನೋಡಿ, ಅವನೂ ಸಹ ಯೊದ್ಯನು ಎಂದು ತಿಳಿದಿರಬಹುದು. [46]ನಾನು ಎಫೆಸದಲ್ಲಿ ಪ್ರಯಾಣ ಮಾಡುವಾಗ ನನ್ನ ಮಾರ್ಗದರ್ಶಕನು ಸರಿಯಾದ ಸ್ಥಳವನ್ನು ತೋರಿಸಿದ್ದನು. [47]ಭೂವಿಜ್ಞಾನಿಗಳು, ಲೂಕನ ಹೇಳಿಕೆಯನ್ನು ಸಾಭೀತುಪಡಿಸಿರುವರು. [48]ಲೀವೀಸ್ ಫೋಸ್ಟರ್. [49]ಗುಡಿಯನ್ನು ಕಾಯುವವನು ಅಂದರೆ ಗುಡಿಸುವವನು, ಈ ಕೆಲಸದ ಕುರಿತು ಆ ಪಟ್ಟಣದವರಿಗೆ ಹೆಮ್ಮೆಯಿತ್ತು. [50]ಸ್ಥಳೀಯ ಮಂಡಳಿ. [51]ಸ್ಥಳೀಯ ಅಧಿಕಾರ, ಆಸ್ಯ ಸೀಮೆಗೆ ಒಬ್ಬನೆ ಮೇಲಾಧಿಕಾರಿ ಇರುವಾಗ, ಇಲ್ಲಿನ ಬಹು ವಚನವು ರಹಸ್ಯವಾಗಿದೆ. ಒಂದು ವೇಳೆ ಅದು ಸಾಮಾನ್ಯ ಪದವಾಗಿರಬಹುದು. ಇದು ಕಷ್ಟದ ಸಮಯವೂ ಆಗಿರಬಹುದು. [52]ನಿಯಮ ಪ್ರಕಾರದ ಸಭೆ "ಪಟ್ಟಣದ ಜನರು ಯಾವಾಗಲೂ ಸೇರುತ್ತಿದ್ದ ಮಂಡಳಿ" (NCV). [53]ಇಬ್ಬರು ಗಾಯರೂ, ಒಂದೇ ಆಗಿದ್ದರು. ಅವರು ಲೂಕನ ಹೇಳಿಕೆಯಂತೆ ಬೇರೆ ಸ್ಥಳದವರಾಗಿದ್ದರು. [54]"ತೀವ್ರವಾದ ಮಾನಸಿಕ ತೊಂದರೆ ಎಂಬ ಹೇಳಿಕೆ."